**Re.No. D. 221**

भारत का राजपत्र
The Gazette of India

# ಭಾರತ ರಾಜಪತ್ರ

**(Extraordinary)**
(ವಿಶೇಷ ಸಂಚಿಕೆ)

भाग IX अनुभाग 1
**PART IX SECTION 1**
ಭಾಗ IX ವಿಭಾಗ 1

प्राधिकार से प्रकाशित
**Published by Authority**
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ

| सं 1<br>No.1<br>ಸಂಖ್ಯೆ 1 | नई दिल्ली, सोमवार, मार्च 29, 1993<br>New Delhi, Monday, March 29, 1993<br>ನವದೆಹಲಿ, ಸೋಮವಾರ, ಮಾರ್ಚ್ 29, 1993 | चैत्र 09, 1915 (शक)<br>Chaitra 06, 1915 (saka)<br>ಚೈತ್ರ 09, 1915 (ಶಕ) | खंड.14<br>Vol. 14<br>ಸಂಪುಟ. 14 |
|---|---|---|---|

**Ministry of Law, Justice & Company Affairs**
(Legislative Department)
New Delhi, 29th March, 1993

**ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ**
**(ವಿಧಾಯೀ ಇಲಾಖೆ)**
**ನವದೆಹಲಿ, 29ನೇ ಮಾರ್ಚ್, 1993**

The Translation in Kannada of the following Acts, namely:- (1) The Payment of Wages Act, 1936 (2) The Contempt of Courts Act, 1971 (3) The Special Marriage Act, 1954 (4) The Cattle Trespass Act, 1871 (5) The Minimum Wages Act, 1948 (6) The International Airports Authority Act, 1971 (7) The Scheduled Castes and the Scheduled Tribes (Prevention of Atrocities) Act, 1989 (8) The Registration Act, 1908 (9) The Police Act, 1861 (10) The Legal Services Authorities Act, 1987 (11) The Environment (Protection) Act, 1986 (12) The Ancient Monuments and Archaeological Sites and Remains Act, 1958 (13) The Explosives Act, 1884 (14) The Equal Remuneration Act, 1976 (15) The Probation of Offenders Act, 1958 (16) The Central Reserve Police Force Act, 1949 (17) The Conservation of foreign Exchange And Prevention of Smuggling Activities Act, 1974-are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ:– (1) ಮಜೂರಿ ಸಂದಾಯ ಅಧಿನಿಯಮ, 1936 (2) ನ್ಯಾಯಾಲಯ ನಿಂದನೆ ಅಧಿನಿಯಮ, 1971 (3) ವಿಶೇಷ ವಿವಾಹ ಅಧಿನಿಯಮ, 1954 (4) ಜಾನುವಾರು ಅತಿಕ್ರಮ ಪ್ರವೇಶ ಅಧಿನಿಯಮ, 1871 (5) ಕನಿಷ್ಠ ಮಜೂರಿ ಅಧಿನಿಯಮ, 1948 (6) ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಅಧಿನಿಯಮ, 1971 (7) ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ, 1989 (8) ನೋಂದಣಿ ಅಧಿನಿಯಮ, 1908 (9) ಪೊಲೀಸು ಅಧಿನಿಯಮ, 1861 (10) ಕಾನೂನು ಸೇವಾ ಪ್ರಾಧಿಕಾರ ಅಧಿನಿಯಮ, 1987 (11) ಪರಿಸರ (ಸಂರಕ್ಷಣೆ) ಅಧಿನಿಯಮ, 1986 (12) ಪ್ರಾಚೀನ ಸ್ಮಾರಕ ಮತ್ತು ಪುರಾತತ್ವ ಸ್ಥಳ ಮತ್ತು ಅವಶೇಷ ಅಧಿನಿಯಮ, 1958 (13) ಸ್ಫೋಟಕ ಅಧಿನಿಯಮ, 1884 (14) ಸಮಾನ ಪರಿಶ್ರಮ ಧನ ಅಧಿನಿಯಮ, 1976 (15) ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮ, 1958 (16) ಕೇಂದ್ರ ರಿಸರ್ವ್ ಪೊಲೀಸು ದಳ ಅಧಿನಿಯಮ, 1949 (17) ವಿದೇಶೀ ವಿನಿಮಯ ಸಂರಕ್ಷಣೆ ಮತ್ತು ಕಳ್ಳಸಾಗಣೆ ಚಟುವಟಿಕೆ ಪ್ರತಿಬಂಧ ಅಧಿನಿಯಮ, 1974– ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

## ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ, 1989
## (1989ರ ಅಧಿನಿಯಮ ಸಂಖ್ಯೆ 33)

[11ನೇ ಸೆಪ್ಟೆಂಬರ್, 1989.]

ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಸದಸ್ಯರ ಮೇಲೆ ದೌರ್ಜನ್ಯದ ಅಪರಾಧಗಳನ್ನು ಎಸಗುವುದನ್ನು ಪ್ರತಿಬಂಧಿಸುವ ಮತ್ತು ಅಂಥ ಅಪರಾಧಗಳ ವಿಚಾರಣೆಗೆ ವಿಶೇಷ ನ್ಯಾಯಾಲಯಗಳಿಗೆ ಮತ್ತು ಪ್ರತ್ಯೇಕ ವಿಶೇಷ ನ್ಯಾಯಾಲಯಗಳಿಗೆ ಮತ್ತು ಅಂಥ ಅಪರಾಧಗಳಿಗೆ ಒಳಗಾದವರಿಗೆ ಪರಿಹಾರ ಮತ್ತು ಪುನರ್‌ವಸತಿಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ನಲವತ್ತನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

### ಅಧ್ಯಾಯ I
### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ, 1989 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ದೌರ್ಜನ್ಯ" ಎಂದರೆ, ಪ್ರಕರಣ 3ರ ಮೇರೆಗೆ ದಂಡನೀಯವಾದ ಅಪರಾಧ;

(ಬಿ) "ಸಂಹಿತೆ" ಎಂದರೆ, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2);

(ಬಿಬಿ) "ಅವಲಂಬಿತ" ಎಂದರೆ, ದೌರ್ಜನ್ಯಕ್ಕೊಳಗಾದ ವ್ಯಕ್ತಿಯ ಮೇಲೆ ಸಂಪೂರ್ಣವಾಗಿ ಅಥವಾ ಪ್ರಮುಖವಾಗಿ ತಮ್ಮ ಆಸರೆಗಾಗಿ ಮತ್ತು ನಿರ್ವಹಣೆಗಾಗಿ ಅವಲಂಬಿತರಾಗಿರುವ ಆತನ ಹೆಂಡತಿ, ಆಕೆಯ ಗಂಡ, ಮಕ್ಕಳು, ಪೋಷಕರು, ಸಹೋದರ ಮತ್ತು ಸಹೋದರಿ;

(ಬಿಸಿ) "ಆರ್ಥಿಕ ಬಹಿಷ್ಕಾರ" ಎಂದರೆ:–

---

* 30ನೇ ಜನವರಿ, 1990, ಅಧಿಸೂಚನೆ ಸಂ. ಎಸ್.ಒ 106(ಇ) ದಿನಾಂಕ: 29ನೇ ಜನವರಿ 1990. ಭಾರತ ವಿಶೇಷ ರಾಜಪತ್ರ, ಭಾಗ–II, ವಿಭಾಗ 3(ii) ನೋಡಿ.

(i) ಇತರ ವ್ಯಕ್ತಿಯೊಂದಿಗೆ ವ್ಯವಹರಿಸಲು, ಕೂಲಿ ಕೆಲಸ ಮಾಡಲು ಅಥವಾ ವ್ಯವಹಾರ ಮಾಡಲು ನಿರಾಕರಿಸುವುದು; ಅಥವಾ

(ii) ಪ್ರತಿಫಲಕ್ಕಾಗಿ ಸೇವೆ ಸಲ್ಲಿಸುವುದನ್ನು, ಯಾವುದೇ ಸೇವೆಗೆ ಪ್ರವೇಶವನ್ನು ಅಥವಾ ಕರಾರುಜನ್ಯ ಅವಕಾಶಗಳನ್ನು ಮಾಡಿಕೊಳ್ಳುವುದನ್ನು ಒಳಗೊಂಡಂತೆ ಅಂಥ ಅವಕಾಶಗಳನ್ನು ನಿರಾಕರಿಸುವುದು; ಅಥವಾ

(iii) ವ್ಯವಹಾರದ ಸಾಮಾನ್ಯ ಕ್ರಮದಲ್ಲಿ ಯಾವ ಕಾರ್ಯಗಳನ್ನು ಸಾಮಾನ್ಯವಾಗಿ ಯಾವ ನಿಬಂಧನೆಗಳ ಪ್ರಕಾರ ಮಾಡಲಾಗುತ್ತದೋ ಅಂಥ ಯಾವುದೇ ಕಾರ್ಯಗಳನ್ನು ಮಾಡಲು ನಿರಾಕರಿಸುವುದು; ಅಥವಾ

(iv) ಇತರ ವ್ಯಕ್ತಿಯೊಂದಿಗೆ ಇಟ್ಟುಕೊಳ್ಳಬೇಕಾದ ವೃತ್ತಿಪರ ಅಥವಾ ವ್ಯವಹಾರ ಸಂಬಂಧಗಳನ್ನು ಇಟ್ಟುಕೊಳ್ಳದಂತೆ ವಿಮುಖರಾಗಿಸುವುದು;

(ಬಿಡಿ) "ಪ್ರತ್ಯೇಕ ವಿಶೇಷ ನ್ಯಾಯಾಲಯ" ಎಂದರೆ, ಈ ಅಧಿನಿಯಮದ ಮೇರೆಗಿನ ಅಪರಾಧಗಳನ್ನು ಪ್ರತ್ಯೇಕವಾಗಿ ಅಧಿವಿಚಾರಣೆ ಮಾಡುವುದಕ್ಕೆ ಪ್ರಕರಣ 14ರ ಉಪ ಪ್ರಕರಣ (1)ರ ಮೇರೆಗೆ ಸ್ಥಾಪಿತವಾದ ಪ್ರತ್ಯೇಕ ವಿಶೇಷ ನ್ಯಾಯಾಲಯ;

(ಬಿಇ) "ಅರಣ್ಯ ಹಕ್ಕುಗಳು" ಎಂಬ ಪದಾವಳಿಯು ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ಅಧಿನಿಯಮ, 2006 (2007ರ 2)ರ ಪ್ರಕರಣ 3ರ ಉಪ ಪ್ರಕರಣ (1)ರಲ್ಲಿ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(ಬಿಎಫ್) "ಮಲಹೊರುವ ಜಾಡಮಾಲಿ" ಎಂಬ ಪದಾವಳಿಯು ಮಲಹೊರುವ ಜಾಡಮಾಲಿ ನಿಯೋಜನೆಯ ನಿಷೇಧ ಮತ್ತು ಅವರ ಪುನರ್ ವಸತಿ ಅಧಿನಿಯಮ, 2013 (2013ರ 25)ರ ಪ್ರಕರಣ 2ರ ಉಪ ಪ್ರಕರಣ (1)ರ (ಜಿ) ಖಂಡದಲ್ಲಿ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(ಬಿಜಿ) "ಲೋಕ ನೌಕರ" ಎಂದರೆ, ಭಾರತ ದಂಡ ಸಂಹಿತೆ (1860ರ 45)ಯ ಪ್ರಕರಣ 21ರಲ್ಲಿ ಪರಿಭಾಷಿಸಿದಂತೆ ಲೋಕ ನೌಕರ ಎಂದು ಭಾವಿಸತಕ್ಕದ್ದು ಹಾಗೂ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಲೋಕ ನೌಕರನೆಂದು ಭಾವಿಸಿದ ಯಾರೇ ವ್ಯಕ್ತಿಯು ಮತ್ತು ಕೇಂದ್ರ ಸರ್ಕಾರದ ಅಥವಾ ಸಂದರ್ಭಾನುಸಾರ, ರಾಜ್ಯ ಸರ್ಕಾರದ ಅಧೀನದಲ್ಲಿ ತನ್ನ ಸ್ಥಾನದ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುವ ಯಾರೇ ವ್ಯಕ್ತಿಯು ಒಳಗೊಳ್ಳುತ್ತಾನೆ;

(ಸಿ) "ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳು" ಇವು ಸಂವಿಧಾನದ 366ನೇ ಅನುಚ್ಛೇದದ (24)ನೇ ಖಂಡ ಮತ್ತು (25)ನೇ ಖಂಡದ ಮೇರೆಗೆ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನು ಹೊಂದಿರತಕ್ಕದ್ದು;

(ಡಿ) "ವಿಶೇಷ ನ್ಯಾಯಾಲಯ" ಎಂದರೆ, ಪ್ರಕರಣ 14ರಲ್ಲಿ ವಿಶೇಷ ನ್ಯಾಯಾಲಯವೆಂದು ನಿರ್ದಿಷ್ಟಪಡಿಸಿರುವ ಸೆಷನ್ಸ್ ನ್ಯಾಯಾಲಯ;

(ಇ) "ವಿಶೇಷ ಸರ್ಕಾರಿ ಪ್ರಾಸಿಕ್ಯೂಟರ್" ಎಂದರೆ, ಪ್ರಕರಣ 15ರಲ್ಲಿ ವಿಶೇಷ ಸರ್ಕಾರಿ ಪ್ರಾಸಿಕ್ಯೂಟರ್ ಎಂದು ನಿರ್ದಿಷ್ಟಪಡಿಸಿದ ಸರ್ಕಾರಿ ಪ್ರಾಸಿಕ್ಯೂಟರ್ ಅಥವಾ ಅದರಲ್ಲಿ ಉಲ್ಲೇಖಿಸಿದ ನ್ಯಾಯವಾದಿ;

(ಇಎ) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಸೇರಿಸಿದ ಅನುಸೂಚಿ;

(ಇಬಿ) "ಸಾಮಾಜಿಕ ಬಹಿಷ್ಕಾರ" ಎಂದರೆ, ಯಾರೇ ವ್ಯಕ್ತಿಯು, ಬೇರೆ ವ್ಯಕ್ತಿಗೆ ಸೇವೆಯನ್ನು ಒದಗಿಸಲು ಅನುಮತಿಸುವುದನ್ನು ಅಥವಾ ಯಾವುದೇ ರೂಢಿಗತ ಸೇವೆಯನ್ನು ಅವನು ಬೇರೆಯವರಿಂದ ಪಡೆಯುವುದನ್ನು ನಿರಾಕರಿಸುವುದು ಅಥವಾ ಇತರ ವ್ಯಕ್ತಿಗಳೊಂದಿಗೆ ಇಟ್ಟುಕೊಳ್ಳಬೇಕಾದ ಸಾಮಾಜಿಕ ಸಂಬಂಧಗಳನ್ನು ಇಟ್ಟುಕೊಳ್ಳಲು ನಿರಾಕರಿಸುವುದು ಅಥವಾ ಇತರರಿಂದ ಅವನನ್ನು ಪ್ರತ್ಯೇಕಿಸುವುದು;

(ಇಸಿ) "ದೌರ್ಜನ್ಯಕ್ಕೊಳಗಾದ ವ್ಯಕ್ತಿ" ಎಂದರೆ, ಪ್ರಕರಣ 2ರ ಉಪ ಪ್ರಕರಣ (1)ರ (ಸಿ) ಖಂಡದ ಮೇರೆಗೆ "ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳು" ಪರಿಭಾಷೆಯ ವ್ಯಾಪ್ತಿಯೊಳಗೆ ಬರುವ ಮತ್ತು ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧ ಎಸಗಿದ ಪರಿಣಾಮವಾಗಿ ದೈಹಿಕವಾಗಿ, ಮಾನಸಿಕವಾಗಿ, ಭಾವನಾತ್ಮಕವಾಗಿ ಅಥವಾ ಹಣಕಾಸಿನ ಹಾನಿ ಅಥವಾ ಮನೋವೇದನೆಗೆ ಒಳಗಾಗಿರುವ ಅಥವಾ ಅವನ ಸ್ವತ್ತಿನ ಹಾನಿಯನ್ನು ಅನುಭವಿಸಿದ ಯಾರೇ ವ್ಯಕ್ತಿ ಮತ್ತು ಇದರಲ್ಲಿ ಆತನ ಸಂಬಂಧಿಕರು, ಕಾನೂನುಸಮ್ಮತ ಪಾಲಕ ಮತ್ತು ಕಾನೂನುಸಮ್ಮತ ವಾರಸುದಾರರು ಒಳಗೊಳ್ಳುತ್ತಾರೆ;

(ಇಡಿ) "ಸಾಕ್ಷಿದಾರ" ಎಂದರೆ, ಈ ಅಧಿನಿಯಮದ ಮೇರೆಗಿನ ಅಪರಾಧದಲ್ಲಿ ಒಳಗೊಂಡ ಯಾವುದೇ ಅಪರಾಧದ ಸಂಗತಿಗಳನ್ನು ಮತ್ತು ಸನ್ನಿವೇಶಗಳನ್ನು ತಿಳಿದಿರುವ ಅಥವಾ ಯಾವುದೇ ಮಾಹಿತಿಯನ್ನು ತನ್ನ ಬಳಿ ಇಟ್ಟುಕೊಂಡಿರುವ ಅಥವಾ ಯಾವುದೇ ಅಪರಾಧದ ತನಿಖೆ, ವಿಚಾರಣೆ ಅಥವಾ ಅಧಿವಿಚಾರಣೆಯ ಉದ್ದೇಶಕ್ಕಾಗಿ ಅವಶ್ಯಕವಾದ ತಿಳುವಳಿಕೆಯನ್ನು ಹೊಂದಿರುವ ಮತ್ತು ಯಾವುದೇ ಮಾಹಿತಿಯನ್ನು ಕೊಡುವುದಕ್ಕೆ ಅಥವಾ ಅಂಥ ಮೊಕದ್ದಮೆಯ ತನಿಖೆ, ವಿಚಾರಣೆ, ಅಧಿವಿಚಾರಣೆಯ ಅವಧಿಯಲ್ಲಿ ಹೇಳಿಕೆಯನ್ನು ನೀಡುವುದಕ್ಕೆ ಅಥವಾ ಯಾವುದೇ ದಸ್ತಾವೇಜನ್ನು ಹಾಜರುಪಡಿಸುವುದಕ್ಕೆ ಯಾವ ವ್ಯಕ್ತಿಯನ್ನು ಅಗತ್ಯಪಡಿಸಬಹುದೋ ಆ ಯಾರೇ ವ್ಯಕ್ತಿ ಮತ್ತು ಅಂಥ ಅಪರಾಧದಿಂದ ದೌರ್ಜನ್ಯಕ್ಕೊಳಗಾದ ವ್ಯಕ್ತಿ ಒಳಗೊಳ್ಳುತ್ತಾನೆ;

(ಎಫ್) ಈ ಅಧಿನಿಯಮದಲ್ಲಿ ಬಳಸಿದ, ಆದರೆ, ಪರಿಭಾಷಿಸಿಲ್ಲದ ಪದಗಳು ಸಂದರ್ಭಾನುಸಾರ ಭಾರತ ದಂಡ ಸಂಹಿತೆ (1860 ರ 45)ಯಲ್ಲಿ, ಭಾರತ ಸಾಕ್ಷ್ಯ ಅಧಿನಿಯಮ, 1872 (1872 ರ 1)ರಲ್ಲಿ ಅಥವಾ ದಂಡ ಪ್ರಕ್ರಿಯಾ ಸಂಹಿತೆ, 1973 (1974 ರ 2)ರಲ್ಲಿ ಪರಿಭಾಷಿಸಿರುವ ಪದಗಳಿಗೆ ಮತ್ತು ಪದಾವಳಿಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರುವುದಾಗಿ ಭಾವಿಸತಕ್ಕದ್ದು.

(2) ಈ ಅಧಿನಿಯಮದಲ್ಲಿ, ಯಾವುದೇ ಅಧಿನಿಯಮಿತಿ ಅಥವಾ ಅದರ ಯಾವುದೇ ಉಪಬಂಧಕ್ಕೆ ಮಾಡಿದ ಯಾವುದೇ ಉಲ್ಲೇಖವನ್ನು ಯಾವ ಪ್ರದೇಶದಲ್ಲಿ ಅಂಥ ಅಧಿನಿಯಮಿತಿ ಅಥವಾ ಅಂಥ ಉಪಬಂಧವು ಜಾರಿಯಲ್ಲಿ ಇರುವುದಿಲ್ಲವೋ ಅದಕ್ಕೆ ಸಂಬಂಧಪಟ್ಟಂತೆ ಆ ಪ್ರದೇಶದಲ್ಲಿ ಜಾರಿಯಲ್ಲಿರುವ ಸಂವಾದಿ ಕಾನೂನು ಯಾವುದಾದರೂ ಇದ್ದರೆ ಅದಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

## ಅಧ್ಯಾಯ II

## ದೌರ್ಜನ್ಯದ ಅಪರಾಧಗಳು

**3. ದೌರ್ಜನ್ಯದ ಅಪರಾಧಗಳಿಗಾಗಿ ದಂಡನೆಗಳು.–** (1) ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನಲ್ಲದ ಯಾರೇ ಆಗಲಿ,–

(ಎ) ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನ ಬಾಯಿಯೊಳಗೆ ತಿನ್ನಲು ಯೋಗ್ಯವಲ್ಲದ ಅಥವಾ ಅಸಹ್ಯಕರವಾದ ಯಾವುದೇ ಪದಾರ್ಥವನ್ನು ಹಾಕಿದರೆ ಅಥವಾ ತಿನ್ನಲು ಯೋಗ್ಯವಲ್ಲದ ಅಥವಾ ಅಸಹ್ಯಕರವಾದ ಪದಾರ್ಥವನ್ನು ಕುಡಿಯುವಂತೆ ಅಥವಾ ತಿನ್ನುವಂತೆ ಅಂಥ ಸದಸ್ಯನನ್ನು ಬಲಾತ್ಕರಿಸಿದರೆ;

(ಬಿ) ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನಿಗೆ ಸೇರಿದ ಆವರಣಗಳಲ್ಲಿ ಅಥವಾ ಅಧಿಭೋಗದಲ್ಲಿರುವ ಆವರಣಗಳ ಪ್ರವೇಶ ದ್ವಾರಗಳಲ್ಲಿ ಮಲಮೂತ್ರಗಳನ್ನು, ರೊಚ್ಚನ್ನು, ಪ್ರಾಣಿಗಳ ಶವಗಳನ್ನು ಅಥವಾ ಯಾವುದೇ ಇತರ ಅಸಹ್ಯಕರ ಪದಾರ್ಥಗಳನ್ನು ಹಾಕಿದರೆ;

(ಸಿ) ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿನ ಯಾರೇ ಸದಸ್ಯನಿಗೆ ನೆರೆಹೊರೆಯಲ್ಲಿ ಮಲಮೂತ್ರಗಳನ್ನು, ಕಚಡಾ ವಸ್ತುಗಳನ್ನು, ಪ್ರಾಣಿಗಳ ಶವಗಳನ್ನು ಅಥವಾ ಯಾವುದೇ ಇತರ ಅಸಹ್ಯಕರವಾದ ಪದಾರ್ಥಗಳನ್ನು ಹಾಕಿ ಅವನಿಗೆ ಹಾನಿ, ಅಪಮಾನ ಅಥವಾ ಕಿರುಕುಳವನ್ನುಂಟು ಮಾಡಲು ಉದ್ದೇಶಿಸಿದ್ದರೆ;

(ಡಿ) ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟಿನ ಸದಸ್ಯನಿಗೆ ಚಪ್ಪಲಿ ಹಾರ ಹಾಕಿ ಅಥವಾ ಅವನನ್ನು ಬೆತ್ತಲೆಗೊಳಿಸಿ ಅಥವಾ ಅರೆಬೆತ್ತಲೆಗೊಳಿಸಿ ಮೆರವಣಿಗೆ ಮಾಡಿದರೆ;

(ಇ) ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನ ಮೈಮೇಲಿಂದ ಬಲಾತ್ಕಾರವಾಗಿ ಬಟ್ಟೆಗಳನ್ನು ಕಳಚಿದರೆ, ಬಲಾತ್ಕಾರವಾಗಿ ತಲೆಯನ್ನು ಬೋಳಿಸಿದರೆ, ಮೀಸೆಯನ್ನು ತೆಗೆದರೆ, ಮುಖಕ್ಕೆ ಅಥವಾ ಶರೀರಕ್ಕೆ ಬಣ್ಣ ಬಳಿದು ಅಥವಾ ಮಾನವ ಘನತೆಗೆ ಕುಂದುಂಟು ಮಾಡುವಂಥ ಅದೇ ಬಗೆಯ ಯಾವುದೇ ಕೃತ್ಯ ಎಸಗಿದರೆ;

(ಎಫ್) ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನ ಒಡೆತನದಲ್ಲಿರುವ ಅಥವಾ ಸ್ವಾಧೀನತೆಯಲ್ಲಿರುವ ಅಥವಾ ಅವನಿಗೆ ಹಂಚಿರುವ ಅಥವಾ ಅವನಿಗೆ ಹಂಚಬೇಕೆಂದು ಯಾವುದೇ ಸಕ್ಷಮ ಪ್ರಾಧಿಕಾರವು ಅಧಿಸೂಚಿಸಿರುವ ಯಾವುದೇ ಭೂಮಿಯನ್ನು ಅಕ್ರಮವಾಗಿ ಆಕ್ರಮಿಸಿಕೊಂಡರೆ ಅಥವಾ ಸಾಗುವಳಿ ಮಾಡಿದರೆ ಅಥವಾ ಅವನಿಗೆ ಹಂಚಿರುವ ಭೂಮಿಯನ್ನು ವರ್ಗಾವಣೆ ಮಾಡಿಸಿಕೊಂಡರೆ;

(ಜಿ) ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನನ್ನು, ಅವನ ಭೂಮಿಯ ಅಥವಾ ಆವರಣದ ಸ್ವಾಧೀನವನ್ನು ಅಕ್ರಮವಾಗಿ ತಪ್ಪಿಸಿದರೆ ಅಥವಾ ಅವನ ಅರಣ್ಯ ಹಕ್ಕುಗಳು ಒಳಗೊಂಡಂತೆ, ಯಾವುದೇ ಭೂಮಿ ಅಥವಾ ಆವರಣ ಅಥವಾ ನೀರಿನ ಅಥವಾ ನೀರಾವರಿ ಸೌಲಭ್ಯಗಳನ್ನು ಅಥವಾ ಬೆಳೆಗಳನ್ನು ನಾಶಪಡಿಸಿ ಅಥವಾ ಬೆಳೆಗಳಿಂದ ಬರುವ ಉತ್ಪನ್ನವನ್ನು ತೆಗೆದುಕೊಳ್ಳುವುದಕ್ಕಾಗಿ ಇರುವ ಅವನ ಹಕ್ಕುಗಳನ್ನು ಅನುಭೋಗಿಸುವುದಕ್ಕೆ ಅಡ್ಡಿಪಡಿಸಿದರೆ;

**ವಿವರಣೆ**.– ಖಂಡ (ಎಫ್) ನ ಮತ್ತು ಈ ಖಂಡದ ಉದ್ದೇಶಕ್ಕಾಗಿ "ಅಕ್ರಮವಾಗಿ" ಎಂಬ ಪದಾವಳಿಯು,–

(ಎ) ವ್ಯಕ್ತಿಗಳ ಇಚ್ಛೆಗೆ ವಿರುದ್ಧವಾಗಿ;

(ಬಿ) ವ್ಯಕ್ತಿಯ ಸಮ್ಮತಿಯಿಲ್ಲದೆ;

(ಸಿ) ವ್ಯಕ್ತಿಯ ಸಮ್ಮತಿ ಪಡೆದಿದ್ದರೆ, ಅಂಥ ಸಮ್ಮತಿಯನ್ನು ಪಡೆಯಲು ಆ ವ್ಯಕ್ತಿಗೆ ಅಥವಾ ಆ ವ್ಯಕ್ತಿಯು ಯಾವ ಇತರ ವ್ಯಕ್ತಿಯಲ್ಲಿ ಆಸಕ್ತಿ ಹೊಂದಿರುವನೋ ಆ ಯಾರೇ ಇತರ ವ್ಯಕ್ತಿಗೆ ಸಾವಿನ ಅಥವಾ ಗಾಯಗೊಳಿಸುವ ಭಯವನ್ನು ಉಂಟು ಮಾಡಿ ಸಮ್ಮತಿ ಪಡೆಯುವುದು; ಅಥವಾ

(ಡಿ) ಅಂಥ ಭೂಮಿಯ ದಾಖಲೆಗಳನ್ನು ನಕಲಿಯಾಗಿ ಸೃಷ್ಟಿಸುವುದು

– ಇವುಗಳನ್ನು ಒಳಗೊಳ್ಳುತ್ತದೆ.

(ಹೆಚ್) ಸಾರ್ವಜನಿಕ ಉದ್ದೇಶಗಳಿಗಾಗಿ ಸರ್ಕಾರವು ವಿಧಿಸಿದ ಯಾವುದೇ ಕಡ್ಡಾಯ ಸೇವೆಯನ್ನು ಹೊರತುಪಡಿಸಿ, ಅನುಸೂಚಿತ ಜಾತಿಯ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನಿಂದ "ಬೇಗಾರ್" ಅಥವಾ ಇತರ ಸ್ವರೂಪಗಳ ಬಲಾತ್ಕಾರದ ಅಥವಾ ಜೀತದ ದುಡಿಮೆಯನ್ನು ಮಾಡಿಸಿದರೆ;

(ಐ) ಅನುಸೂಚಿತ ಜಾತಿಯ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನನ್ನು, ಮಾನವರ ಅಥವಾ ಪ್ರಾಣಿಗಳ ಶವಗಳನ್ನು ಸಾಗಿಸುವುದಕ್ಕೆ ಅಥವಾ ಅವುಗಳನ್ನು ವಿಲೇವಾರಿ ಮಾಡುವುದಕ್ಕೆ ಅಥವಾ ಸಮಾಧಿ ಮಾಡಲು ಗುಂಡಿ ತೋಡುವುದಕ್ಕೆ ಒತ್ತಾಯಿಸಿದರೆ;

(ಜೆ) ಅನುಸೂಚಿತ ಜಾತಿಯ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನಿಂದ ಮಲಹೊರುವ ಜಾಡಮಾಲಿ ಕೆಲಸ ಮಾಡಿಸಿದರೆ ಅಥವಾ ಅಂಥ ಕೆಲಸಕ್ಕೆ ನೇಮಿಸಿಕೊಂಡರೆ ಅಥವಾ ಅಂಥ ಸದಸ್ಯನನ್ನು ಕೆಲಸಕ್ಕೆ ನೇಮಿಸಿಕೊಳ್ಳಲು ಅನುಮತಿ ನೀಡಿದರೆ;

(ಕೆ) ಅನುಸೂಚಿತ ಜಾತಿಗೆ ಅಥವಾ ಅನುಸೂಚಿತ ಬುಡಕಟ್ಟಿಗೆ ಸೇರಿದ ಮಹಿಳೆಯನ್ನು ದೈವಕ್ಕೆ, ದೇವತಾ ವಿಗ್ರಹಕ್ಕೆ, ಪೂಜೆಯ ವಸ್ತುವಿಗೆ, ದೇವಸ್ಥಾನಕ್ಕೆ ಅಥವಾ ಯಾವುದೇ ಧಾರ್ಮಿಕ ಸಂಸ್ಥೆಗೆ ದೇವದಾಸಿಯಾಗಲು ಉತ್ತೇಜಿಸಿದರೆ ಅಥವಾ ಇದೇ ತರಹದ ಇನ್ನಾವುದೇ ರೂಢಿಯನ್ನು ಆಚರಣೆಗೆ ತಂದರೆ ಅಥವಾ ಇಂಥ ಕೃತ್ಯ ಎಸಗಿದರೆ;

(ಎಲ್) ಅನುಸೂಚಿತ ಜಾತಿಯ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನನ್ನು,–

(ಎ) ನಿರ್ದಿಷ್ಟ ಅಭ್ಯರ್ಥಿಗೆ ಮತದಾನ ಮಾಡದಂತೆ ಅಥವಾ ಮತದಾನ ಮಾಡುವಂತೆ ಅಥವಾ ಕಾನೂನಿನ ಮೂಲಕ ಉಪಬಂಧಿಸಿರುವುದನ್ನು ಹೊರತುಪಡಿಸಿ ಅನ್ಯಥಾ ಯಾವುದೇ ರೀತಿಯಲ್ಲಿ ಮತದಾನ ಮಾಡುವಂತೆ;

(ಬಿ) ಅಭ್ಯರ್ಥಿಯಾಗಿ ನಾಮಪತ್ರವನ್ನು ದಾಖಲಿಸದಿರಲು ಅಥವಾ ಅಂಥ ನಾಮಪತ್ರವನ್ನು ಹಿಂಪಡೆಯುವುದಕ್ಕೆ; ಅಥವಾ

(ಸಿ) ಅನುಸೂಚಿತ ಜಾತಿಯ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನನ್ನು ಯಾವುದೇ ಚುನಾವಣೆಯಲ್ಲಿ ಅಭ್ಯರ್ಥಿ ಎಂದು ಸೂಚಿಸದಿರಲು ಅಥವಾ ಆತನ ನಾಮಪತ್ರವನ್ನು ಅನುಮೋದಿಸದಿರಲು

– ಬಲಾತ್ಕರಿಸಿದರೆ ಅಥವಾ ಬೆದರಿಸಿದರೆ ಅಥವಾ ಪ್ರತಿಬಂಧಿಸಿದರೆ.

(ಎಂ) ಸಂವಿಧಾನದ ಭಾಗ IXರ ಪ್ರಕಾರ ಪಂಚಾಯಿತಿಯ ಸದಸ್ಯನಾಗಿರುವ ಅಥವಾ ಅಧ್ಯಕ್ಷನಾಗಿರುವ ಅಥವಾ ಇನ್ನಾವುದೇ ಸ್ಥಾನವನ್ನು ಹೊಂದಿರುವ ಅಥವಾ ಸಂವಿಧಾನದ IXಎ ಭಾಗದ

ಪ್ರಕಾರ ಪುರಸಭೆಯಲ್ಲಿ ಸದಸ್ಯನಾಗಿರುವ ಅಥವಾ ಅಧ್ಯಕ್ಷನಾಗಿರುವ ಅಥವಾ ಇನ್ನಾವುದೇ ಅಂಥ ಅಧಿಕಾರ ಸ್ಥಾನವನ್ನು ಹೊಂದಿರುವ ಅನುಸೂಚಿತ ಜಾತಿಯ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನನ್ನು ದೈನಂದಿನ ಕೆಲಸ ಕಾರ್ಯಗಳನ್ನು ಮಾಡದಿರುವಂತೆ ಆತನನ್ನು ಒತ್ತಾಯಪಡಿಸಿದರೆ, ಬೆದರಿಸಿದರೆ ಅಥವಾ ಅಡ್ಡಿಪಡಿಸಿದರೆ;

(ಎನ್) ಮತದಾನದ ನಂತರ, ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನಿಗೆ ಗಾಯಗೊಳಿಸಿದರೆ ಅಥವಾ ತೀವ್ರ ಗಾಯಗೊಳಿಸಿದರೆ ಅಥವಾ ಆತನ ಮೇಲೆ ಹಲ್ಲೆ ಮಾಡಿದರೆ ಅಥವಾ ಆತನಿಗೆ ಸಾಮಾಜಿಕ ಅಥವಾ ಆರ್ಥಿಕ ಬಹಿಷ್ಕರಣೆಯನ್ನು ವಿಧಿಸಿದರೆ ಅಥವಾ ವಿಧಿಸಲಾಗುವುದೆಂದು ಭಯಪಡಿಸಿದರೆ ಅಥವಾ ಆತನಿಗೆ ದೊರಕಬೇಕಾದ ಯಾವುದೇ ಸಾರ್ವಜನಿಕ ಸೇವೆಯ ಪ್ರಯೋಜನಗಳನ್ನು ಪಡೆಯದಂತೆ ಅಡ್ಡಿಪಡಿಸಿದರೆ;

(ಒ) ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನು ನಿರ್ದಿಷ್ಟ ಅಭ್ಯರ್ಥಿಗೆ ಮತದಾನ ಮಾಡಿದ ಕಾರಣಕ್ಕೆ ಅಥವಾ ಮತದಾನ ಮಾಡದಿದ್ದ ಕಾರಣಕ್ಕೆ ಅಥವಾ ಕಾನೂನಿನಲ್ಲಿ ಉಪಬಂಧಿಸಿರುವಂಥ ರೀತಿಯಲ್ಲಿ ಮತದಾನ ಮಾಡಿದ್ದಕ್ಕಾಗಿ ಆತನ ವಿರುದ್ಧ ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧವನ್ನು ಮಾಡಿದರೆ;

(ಪಿ) ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನ ವಿರುದ್ಧ ಸುಳ್ಳು, ದುರುದ್ದೇಷಪೂರ್ವಕ ಅಥವಾ ಕಿರುಕುಳಕಾರಿ ದಾವೆ ಅಥವಾ ಕ್ರಿಮಿನಲ್ ವ್ಯವಹರಣೆಗಳನ್ನು ಅಥವಾ ಇತರ ಕಾನೂನಿನ ವ್ಯವಹರಣೆಗಳನ್ನು ಹೂಡಿದರೆ;

(ಕ್ಯೂ) ಯಾರೇ ಲೋಕ ನೌಕರನಿಗೆ ಯಾವುದೇ ಸುಳ್ಳು ಅಥವಾ ಕ್ಷುಲ್ಲಕ ಮಾಹಿತಿಯನ್ನು ಕೊಟ್ಟರೆ ಮತ್ತು ಆ ಮೂಲಕ ಅಂಥ ಲೋಕ ನೌಕರನು ತನ್ನ ಕಾನೂನುಬದ್ಧ ಅಧಿಕಾರವನ್ನು ಅನುಸೂಚಿತ ಜಾತಿಯ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನಿಗೆ ಹಾನಿ ಉಂಟುಮಾಡಲು ಅಥವಾ ಕಿರುಕುಳ ಉಂಟುಮಾಡಲು ಬಳಕೆ ಮಾಡುವಂತೆ ಮಾಡಿದರೆ;

(ಆರ್) ಸಾರ್ವಜನಿಕರಿಗೆ ಕಾಣುವಂತೆ ಯಾವುದೇ ಸ್ಥಳದಲ್ಲಿ ಅನುಸೂಚಿತ ಜಾತಿಯ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನನ್ನು ಉದ್ದೇಶಪೂರ್ವಕವಾಗಿ ಅಪಮಾನಗೊಳಿಸಿದರೆ ಅಥವಾ ಅಪಮಾನಗೊಳಿಸುವ ಉದ್ದೇಶದಿಂದ ಬೆದರಿಕೆ ಹಾಕಿದರೆ;

(ಎಸ್) ಸಾರ್ವಜನಿಕರಿಗೆ ಕಾಣುವಂತೆ ಯಾವುದೇ ಸ್ಥಳದಲ್ಲಿ ಅನುಸೂಚಿತ ಜಾತಿಯ ಅಥವಾ ಅನುಸೂಚಿತ ಬುಡಕಟ್ಟಿನ ಯಾರೇ ಸದಸ್ಯನನ್ನು ಅವನ ಜಾತಿಯ ಹೆಸರಿನಿಂದ ನಿಂದಿಸಿದರೆ;

(ಟಿ) ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿಗೆ ಸೇರಿದ ಸದಸ್ಯರು ಸಾಮಾನ್ಯವಾಗಿ ಪವಿತ್ರವೆಂದು ಭಾವಿಸುವ ಅಥವಾ ಅತ್ಯಂತ ಗೌರವದಿಂದ ಕಾಣುವ ಯಾವುದೇ ವಸ್ತುವನ್ನು ನಾಶಪಡಿಸಿದರೆ, ಅದಕ್ಕೆ ಹಾನಿ ಉಂಟುಮಾಡಿದರೆ ಅಥವಾ ಅದನ್ನು ಅಪವಿತ್ರಗೊಳಿಸಿದರೆ.

**ವಿವರಣೆ.–** ಈ ಖಂಡದ ಉದ್ದೇಶಗಳಿಗಾಗಿ "ವಸ್ತು" ಎಂಬ ಪದಾವಳಿಯು, ಪ್ರತಿಮೆ, ಛಾಯಾಚಿತ್ರ ಮತ್ತು ಪ್ರತಿಕೃತಿಯನ್ನು ಒಳಗೊಳ್ಳುತ್ತದೆ;

(ಯು) ಅನುಸೂಚಿತ ಜಾತಿಯ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನ ವಿರುದ್ಧ, ಬರಹದ ಮೂಲಕವಾಗಲಿ ಅಥವಾ ಮಾತಿನಿಂದಾಗಲಿ ಅಥವಾ ಸನ್ನೆಗಳಿಂದಾಗಲಿ ಅಥವಾ ದೃಶ್ಯ ನಿರೂಪಣೆಯಿಂದಾಗಲಿ ಅಥವಾ ಬೇರೆ ರೀತಿಯಲ್ಲಿ ಹಗೆತನವನ್ನು, ದ್ವೇಷವನ್ನು ಅಥವಾ ವೈಮನಸ್ಸಿನ ಭಾವನೆಗಳನ್ನು ಉಂಟುಮಾಡಲು ಉತ್ತೇಜನ ನೀಡಿದರೆ ಅಥವಾ ಉತ್ತೇಜಿಸುವುದಕ್ಕೆ ಪ್ರಯತ್ನಿಸಿದರೆ;

(ವಿ) ಅನುಸೂಚಿತ ಜಾತಿಗೆ ಅಥವಾ ಅನುಸೂಚಿತ ಬುಡಕಟ್ಟಿಗೆ ಸೇರಿದ ಸದಸ್ಯರು ಗೌರವಿಸುವ ಯಾರೇ ಮೃತ ವ್ಯಕ್ತಿಯನ್ನು, ಬರಹದಿಂದಾಗಲಿ ಅಥವಾ ಮಾತಿನಿಂದಾಗಲಿ ಅಥವಾ ಯಾವುದೇ ಇತರ ರೀತಿಗಳ ಮೂಲಕವಾಗಲಿ ಅಗೌರವ ತೋರಿದರೆ;

(ಡಬ್ಲ್ಯೂ) ಉದ್ದೇಶಪೂರ್ವಕವಾಗಿ,–

(i) ಅನುಸೂಚಿತ ಜಾತಿಗೆ ಅಥವಾ ಅನುಸೂಚಿತ ಬುಡಕಟ್ಟಿಗೆ ಸೇರಿದ ಮಹಿಳೆಯನ್ನು, ಆಕೆಯು ಅನುಸೂಚಿತ ಜಾತಿಗೆ ಅಥವಾ ಅನುಸೂಚಿತ ಬುಡಕಟ್ಟಿಗೆ ಸೇರಿದವಳೆಂದು ತಿಳಿದಿದ್ದೂ, ಆಕೆಯ ಸಮ್ಮತಿ ಇಲ್ಲದೆ ಆಕೆಯನ್ನು ಸ್ಪರ್ಶಿಸಿದರೆ ಮತ್ತು ಆ ಕೃತ್ಯವು ಲೈಂಗಿಕ ಸ್ವರೂಪದ್ದಾಗಿದ್ದರೆ;

(ii)ಅನುಸೂಚಿತ ಜಾತಿಗೆ ಅಥವಾ ಅನುಸೂಚಿತ ಬುಡಕಟ್ಟಿಗೆ ಸೇರಿದ ಮಹಿಳೆಯನ್ನು, ಆಕೆಯು ಅನುಸೂಚಿತ ಜಾತಿಗೆ ಅಥವಾ ಅನುಸೂಚಿತ ಬುಡಕಟ್ಟಿಗೆ ಸೇರಿದವಳೆಂದು ತಿಳಿದಿದ್ದೂ, ಲೈಂಗಿಕ ಸ್ವರೂಪದ ಪದಗಳನ್ನು ಬಳಸಿದರೆ, ಕೃತ್ಯಗಳನ್ನು ಎಸಗಿದರೆ ಅಥವಾ ಅಂಥ ಸ್ವರೂಪದ ಅಂಗ ಸನ್ನೆಗಳನ್ನು ಮಾಡಿದರೆ:

**ವಿವರಣೆ.–** ಉಪಖಂಡ (i)ರ ಉದ್ದೇಶಕ್ಕಾಗಿ, "ಸಮ್ಮತಿ" ಎಂದರೆ, ಆ ಕೃತ್ಯದಲ್ಲಿ ಭಾಗಿಯಾಗಲು ಶಬ್ದಗಳಿಂದಾಗಲಿ, ಸನ್ನೆಗಳಿಂದಾಗಲಿ ಅಥವಾ ಶಬ್ದರಹಿತವಾದ ಯಾವುದೇ ರೀತಿಯ ಸಂವಹನದ ಮೂಲಕವಾಗಲಿ ಸ್ವಇಚ್ಛೆಯಿಂದ ಸಂಶಯ ಬರದಂತೆ ಸಮ್ಮತಿಸುವುದು:

ಪರಂತು, ಅನುಸೂಚಿತ ಜಾತಿಗೆ ಅಥವಾ ಅನುಸೂಚಿತ ಬುಡಕಟ್ಟಿಗೆ ಸೇರಿದ ಮಹಿಳೆಯ ಮೇಲೆ ಲೈಂಗಿಕ ಸ್ವರೂಪದ ಯಾವುದೇ ಕೃತ್ಯವನ್ನು ಎಸಗಿದಾಗ, ಆಕೆ ದೈಹಿಕವಾಗಿ ಪ್ರತಿರೋಧ ಮಾಡದಿರುವ ಸಂಗತಿಯ ಕಾರಣ ಮಾತ್ರದಿಂದಲೇ ಲೈಂಗಿಕ ಚಟುವಟಿಕೆಗೆ ಸಮ್ಮತಿ ನೀಡಿದ್ದಾಳೆಂದು ಭಾವಿಸತಕ್ಕದ್ದಲ್ಲ:

ಮತ್ತು ಪರಂತು, ಆಪಾದಿತನನ್ನು ಒಳಗೊಂಡಂತೆ ಆ ಮಹಿಳೆಯ ಲೈಂಗಿಕ ಚಾರಿತ್ರ್ಯದಿಂದ, ಆಕೆಯು ಸಮ್ಮತಿ ನೀಡಿದ್ದಾಳೆಂದು ಅಥವಾ ಅಪರಾಧ ಕಡಿಮೆ ಮಾಡುತ್ತದೆಂದು ಇಂಗಿತವಾಗತಕ್ಕದ್ದಲ್ಲ;

(ಎಕ್ಸ್) ಅನುಸೂಚಿತ ಜಾತಿಯ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯರು, ಸಾಮಾನ್ಯವಾಗಿ ಬಳಕೆ ಮಾಡುತ್ತಿರುವ ಯಾವುದೇ ನೀರಿನ ಚಿಲುಮೆಯನ್ನು, ಜಲಾಶಯವನ್ನು ಅಥವಾ ಇತರ ಯಾವುದೇ ಮೂಲವನ್ನು, ಯಾವ ಉದ್ದೇಶಕ್ಕಾಗಿ ಅದನ್ನು ಸಾಮಾನ್ಯವಾಗಿ ಬಳಸಲಾಗುತ್ತಿದೆಯೋ ಆ ಉದ್ದೇಶಕ್ಕಾಗಿ ಅದರ ಉಪಯುಕ್ತತೆಯ ಗುಣಮಟ್ಟವನ್ನು ಕಡಿಮೆಯಾಗುವ ಹಾಗೆ ಕೆಡಿಸಿದರೆ ಅಥವಾ ಮಲಿನಗೊಳಿಸಿದರೆ;

(ವೈ) ಅನುಸೂಚಿತ ಜಾತಿಯ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನಿಗೆ, ಸಾರ್ವಜನಿಕರು ಸೇರುವ ಸ್ಥಳಕ್ಕೆ ಹೋಗುವ ದಾರಿಯ ಮೇಲೆ ಆತನಿಗಿರುವ ರೂಢಿಗತ ಹಕ್ಕನ್ನು ನಿರಾಕರಿಸಿದರೆ ಅಥವಾ ಯಾವುದಕ್ಕೆ ಸಮಾಜದ ಇತರ ಸದಸ್ಯರು ಅಥವಾ ಸಮಾಜದ ಯಾವುದೇ ವರ್ಗವು ಬಳಸುವ ಅಧಿಕಾರವನ್ನು ಅಥವಾ ಪ್ರವೇಶಾವಕಾಶವನ್ನು ಹೊಂದಿರುವರೋ ಆ ಸಾರ್ವಜನಿಕರು ಸೇರುವ ಆ ಸ್ಥಳವನ್ನು ಆತನು ಬಳಸುವುದಕ್ಕೆ ಅಥವಾ ಅದರ ಪ್ರವೇಶಕ್ಕೆ ಅಡ್ಡಿಪಡಿಸಿದರೆ;

(ಝಡ್) ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನನ್ನು, ಮನೆಯನ್ನು, ಗ್ರಾಮವನ್ನು ಅಥವಾ ವಾಸದ ಇತರ ಸ್ಥಳವನ್ನು ಬಿಟ್ಟು ಹೋಗುವಂತೆ ಬಲಾತ್ಕರಿಸಿದರೆ ಅಥವಾ ಬಿಟ್ಟು ಹೋಗುವಂತೆ ಮಾಡಿದರೆ:

ಪರಂತು, ಈ ಖಂಡದಲ್ಲಿ ಒಳಗೊಂಡಿರುವ ಯಾವುದೂ, ಸರ್ಕಾರಿ ಕರ್ತವ್ಯವನ್ನು ನಿರ್ವಹಿಸಲು ತೆಗೆದುಕೊಂಡ ಯಾವುದೇ ಕ್ರಮಗಳಿಗೆ ಅನ್ವಯವಾಗತಕ್ಕದ್ದಲ್ಲ;

(ಝಡ್ಎ) ಅನುಸೂಚಿತ ಜಾತಿಯ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನಿಗೆ,–

(ಎ) ಇತರರು ಬಳಸುವ ರೀತಿಯಲ್ಲಿಯೇ ಒಂದು ಪ್ರದೇಶದ ಸಾಮಾನ್ಯ ಸ್ವತ್ತಿನ ಸಂಪನ್ಮೂಲಗಳನ್ನು ಬಳಸಲು ಅಥವಾ ಇತರರಂತೆಯೇ ಶವಸಂಸ್ಕಾರ ಮಾಡಲು ಅಥವಾ ಶವಸಂಸ್ಕಾರದ ಸ್ಥಳವನ್ನು ಬಳಸಲು ಅಥವಾ ಯಾವುದೇ ನದಿಯನ್ನು, ತೊರೆಯನ್ನು, ಚಿಲುಮೆಯನ್ನು, ಬಾವಿಯನ್ನು, ಕೆರೆಯನ್ನು, ನೀರಿನ ತೊಟ್ಟಿಯನ್ನು, ನೀರಿನ ನಲ್ಲಿಯನ್ನು ಅಥವಾ ಇತರ ನೀರಿನ ಸ್ಥಳವನ್ನು ಅಥವಾ ಯಾವುದೇ ಸ್ನಾನದ ಘಟ್ಟವನ್ನು ಯಾವುದೇ ಸಾರ್ವಜನಿಕ ಸಾರಿಗೆಯನ್ನು, ಯಾವುದೇ ರಸ್ತೆಯನ್ನು ಅಥವಾ ದಾರಿಯನ್ನು ಬಳಸುವುದಕ್ಕೆ;

(ಬಿ) ಸಾರ್ವಜನಿಕ ಸ್ಥಳದಲ್ಲಿ ಬೈಸಿಕಲ್ಲುಗಳನ್ನು ಅಥವಾ ಮೋಟಾರು ಸೈಕಲ್ಲುಗಳನ್ನು ಓಡಿಸಲು ಅಥವಾ ಅದರಲ್ಲಿ ಸವಾರಿ ಮಾಡುವುದಕ್ಕೆ ಅಥವಾ ಪಾದರಕ್ಷೆಗಳನ್ನು ಅಥವಾ ಹೊಸ ಬಟ್ಟೆಗಳನ್ನು ಧರಿಸಲು ಅಥವಾ ಮದುವೆ ಮೆರವಣಿಗೆಗಳನ್ನು ನಡೆಸುವುದಕ್ಕೆ, ಮದುವೆ

ಮೆರವಣಿಗೆಯಲ್ಲಿ ಕುದುರೆ ಮೇಲೆ ಕುಳಿತು ಅಥವಾ ಯಾವುದೇ ಇತರ ವಾಹನದಲ್ಲಿ ಕುಳಿತು ಹೋಗಿ ಬರುವುದಕ್ಕೆ;

(ಸಿ) ಸಾರ್ವಜನಿಕರಿಗೆ ಅಥವಾ ಅದೇ ಧರ್ಮವನ್ನು ಆಚರಿಸುತ್ತಿರುವ ಇತರ ವ್ಯಕ್ತಿಗಳಿಗೆ ಮುಕ್ತವಾಗಿರುವ ಆ ಯಾವುದೇ ಪೂಜಾ ಸ್ಥಳವನ್ನು ಪ್ರವೇಶಿಸುವುದಕ್ಕೆ ಅಥವಾ ಜಾತ್ರೆಗಳನ್ನೂ ಒಳಗೊಂಡಂತೆ ಯಾವುದೇ ಧಾರ್ಮಿಕ, ಸಾಮಾಜಿಕ ಅಥವಾ ಸಾಂಸ್ಕೃತಿಕ ಮೆರವಣಿಗೆಗಳಲ್ಲಿ ಭಾಗವಹಿಸುವುದಕ್ಕೆ ಅಥವಾ ಮೆರವಣಿಗೆಗಳನ್ನು ನಡೆಸುವುದಕ್ಕೆ;

(ಡಿ) ಯಾವುದೇ ಶೈಕ್ಷಣಿಕ ಸಂಸ್ಥೆಗೆ, ಆಸ್ಪತ್ರೆಗೆ, ಚಿಕಿತ್ಸಾಲಯಕ್ಕೆ, ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ, ಅಂಗಡಿಗೆ ಅಥವಾ ಸಾರ್ವಜನಿಕ ಮನೋರಂಜನಾ ಸ್ಥಳಗಳಿಗೆ ಅಥವಾ ಯಾವುದೇ ಇತರ ಸಾರ್ವಜನಿಕ ಸ್ಥಳಗಳಿಗೆ ಪ್ರವೇಶಿಸುವುದಕ್ಕೆ ಅಥವಾ ಸಾರ್ವಜನಿಕರಿಗೆ ಮುಕ್ತವಾಗಿರುವ ಯಾವುದೇ ಸ್ಥಳದಲ್ಲಿ ಸಾರ್ವಜನಿಕರ ಬಳಕೆಗಾಗಿ ಇರುವ ಯಾವುದೇ ಅಡಿಗೆ ಪಾತ್ರೆಗಳನ್ನು ಅಥವಾ ವಸ್ತುಗಳನ್ನು ಬಳಸುವುದಕ್ಕೆ; ಅಥವಾ

(ಇ) ಯಾವುದೇ ವೃತ್ತಿಯನ್ನು ನಡೆಸುವುದಕ್ಕೆ ಅಥವಾ ಯಾವುದೇ ಉದ್ಯೋಗವನ್ನು ಮಾಡುವುದಕ್ಕೆ, ವ್ಯಾಪಾರವನ್ನು ಅಥವಾ ವ್ಯವಹಾರವನ್ನು ನಡೆಸುವುದಕ್ಕೆ ಅಥವಾ ಯಾವುದೇ ಕೆಲಸದಲ್ಲಿನ ನಿಯೋಜನೆಯನ್ನು ಬಳಸಿಕೊಳ್ಳಲು ಸಾರ್ವಜನಿಕ ಸದಸ್ಯರಿಗೆ ಅಥವಾ ಸಾರ್ವಜನಿಕರ ಯಾವುದೇ ಒಂದು ವರ್ಗಕ್ಕೆ ಇರುವ ಹಕ್ಕಿಗೆ ಅಥವಾ ಅಂಥ ನಿಯೋಜನೆಯನ್ನು ಬಳಸಿಕೊಳ್ಳಲು ಇರುವ ಅವಕಾಶಕ್ಕೆ

– ಯಾವುದೇ ರೀತಿಯಲ್ಲಿ ಅಡ್ಡಿಪಡಿಸಿದರೆ ಅಥವಾ ಪ್ರತಿಬಂಧಿಸಿದರೆ;

(ಝಡ್‌ಬಿ) ವಾಮಚಾರ ನಡೆಸಿದ ಆಪಾದನೆಯ ಮೇಲೆ ಮಾಟಗಾತಿ ಅಥವಾ ಮಾಟಗಾರ ಎಂಬ ಆಪಾದನೆಯ ಮೇಲೆ ಅನುಸೂಚಿತ ಜಾತಿಯ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನಿಗೆ ದೈಹಿಕ ಹಿಂಸೆ ಅಥವಾ ಮಾನಸಿಕ ಯಾತನೆ ಉಂಟುಮಾಡಿದರೆ; ಅಥವಾ

(ಝಡ್‌ಸಿ)ಅನುಸೂಚಿತ ಜಾತಿಗೆ ಅಥವಾ ಅನುಸೂಚಿತ ಬುಡಕಟ್ಟಿಗೆ ಸೇರಿದ ಯಾರೇ ವ್ಯಕ್ತಿಗೆ ಅಥವಾ ಕುಟುಂಬಕ್ಕೆ ಅಥವಾ ಸಮೂಹಕ್ಕೆ ಸಾಮಾಜಿಕ ಅಥವಾ ಆರ್ಥಿಕ ಬಹಿಷ್ಕಾರವನ್ನು ವಿಧಿಸಿದರೆ ಅಥವಾ ವಿಧಿಸಲಾಗುವುದೆಂದು ಬೆದರಿಸಿದರೆ

– ಆ ಯಾರೇ ವ್ಯಕ್ತಿಯು, ಆರು ತಿಂಗಳಿಗಿಂತ ಕಡಿಮೆಯಲ್ಲದ, ಆದರೆ ಐದು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿನವನಲ್ಲದ ಯಾರೇ ಆಗಲಿ,–

(i) ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿಗೆ ಸೇರಿದ ಯಾರೇ ವ್ಯಕ್ತಿಯನ್ನು, ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಮೂಲಕ ಮರಣ ದಂಡನೆಯ ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣೀತನಾಗುವಂತೆ ಮಾಡಲು ಉದ್ದೇಶಿಸಿ ಅಥವಾ ಆ ಮೂಲಕ ತಾನು ಉಂಟುಮಾಡುವ ಸಂಭವವಿರುವುದಾಗಿ ತಿಳಿದೂ ಸುಳ್ಳು ಸಾಕ್ಷ್ಯವನ್ನು ಕೊಟ್ಟರೆ ಅಥವಾ ಸೃಷ್ಟಿಸಿದರೆ, ಅವನು ಆಜೀವ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಅಂಥ ಸುಳ್ಳು ಅಥವಾ ಸೃಷ್ಟಿಸಿದ ಸಾಕ್ಷ್ಯದ ಪರಿಣಾಮವಾಗಿ ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿನ ನಿರ್ದೋಷಿಯಾದ ಸದಸ್ಯನು ಅಪರಾಧಿಯೆಂದು ನಿರ್ಣೀತನಾದರೆ ಮತ್ತು ಅವನನ್ನು ಗಲ್ಲಿಗೇರಿಸಿದ್ದರೆ, ಅಂಥ ಸುಳ್ಳು ಸಾಕ್ಷ್ಯವನ್ನು ಕೊಟ್ಟಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಯು ಮರಣ ದಂಡನೆಯಿಂದ ದಂಡಿತನಾಗತಕ್ಕದ್ದು;

(ii)ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿನ ಯಾರೇ ವ್ಯಕ್ತಿಯನ್ನು, ಮರಣ ದಂಡನೀಯವಾಗಿರದಂಥ, ಆದರೆ ಏಳು ವರ್ಷಗಳು ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ಕಾರಾವಾಸದಿಂದ ದಂಡನೀಯವಾದ ಅಪರಾಧದ ಬಗ್ಗೆ ಅಪರಾಧಿ ಎಂದು ನಿರ್ಣೀತನಾಗುವಂತೆ ಮಾಡಲು ಉದ್ದೇಶಿಸಿ ಅಥವಾ ತನ್ಮೂಲಕ ತಾನು ಉಂಟುಮಾಡುವ ಸಂಭವವಿರುವುದಾಗಿ ತಿಳಿದೂ ಸುಳ್ಳು ಸಾಕ್ಷ್ಯವನ್ನು ಕೊಟ್ಟರೆ ಅಥವಾ ಸೃಷ್ಟಿಸಿದರೆ, ಅವನು ಆರು ತಿಂಗಳುಗಳಿಗೆ ಕಡಿಮೆಯಿಲ್ಲದ ಆದರೆ ಏಳು ವರ್ಷಗಳಿಗೆ ಅಥವಾ ಅದಕ್ಕಿಂತ ಹೆಚ್ಚಿಗೆಯಾಗಿ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು;

(iii) ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿನ ವ್ಯಕ್ತಿಗೆ ಸೇರಿರುವ ಯಾವುದೇ ಸ್ವತ್ತಿಗೆ ಹಾನಿಯನ್ನುಂಟುಮಾಡಲು ಉದ್ದೇಶಿಸಿ ಅಥವಾ ತನ್ಮೂಲಕ ತಾನು ಅದನ್ನುಂಟು ಮಾಡುವ ಸಂಭವವಿದೆಯೆಂದು ತಿಳಿದೂ ಬೆಂಕಿ ಅಥವಾ ಯಾವುದೇ ಸ್ಫೋಟಕ ವಸ್ತುವಿನಿಂದ ಕೇಡನ್ನು ಉಂಟುಮಾಡಿದರೆ, ಅವನು ಆರು ತಿಂಗಳುಗಳಿಗಿಂತ ಕಡಿಮೆಯಿಲ್ಲದ ಆದರೆ ಏಳು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು;

(iv)ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿನ ವ್ಯಕ್ತಿಯು ಪೂಜಾ ಸ್ಥಳವೆಂದು ಅಥವಾ ಮನುಷ್ಯ ವಾಸದ ಸ್ಥಳವೆಂದು ಅಥವಾ ಸ್ವತ್ತಿನ ಅಭಿರಕ್ಷೆಯ ಸ್ಥಳವೆಂದು ಸಾಮಾನ್ಯವಾಗಿ ಉಪಯೋಗಿಸುತ್ತಿರುವಂಥ ಯಾವುದೇ ಕಟ್ಟಡವನ್ನು ನಾಶ ಮಾಡಲು ಉದ್ದೇಶಿಸಿ ಅಥವಾ ತನ್ಮೂಲಕ ಹಾಗೆ ಮಾಡುವ ಸಂಭವವಿದೆ ಎಂದು ತಿಳಿದೂ ಬೆಂಕಿ ಅಥವಾ ಯಾವುದೇ ಸ್ಫೋಟಕ ವಸ್ತುವಿನಿಂದ ಕೇಡನ್ನು ಉಂಟುಮಾಡಿದರೆ, ಅವನು ಆಜೀವ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು;

(V) ಅಂಥ ವ್ಯಕ್ತಿಯು, ಅನುಸೂಚಿತ ಜಾತಿಯ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನೆಂಬುದು ಅಥವಾ ಅಂಥ ಸ್ವತ್ತು ಅಂಥ ಸದಸ್ಯನಿಗೆ ಸೇರಿದೆಯೆಂಬುದು ಗೊತ್ತಿದ್ದೂ ಅಂಥ ವ್ಯಕ್ತಿ ಅಥವಾ ಅಂಥ ಸ್ವತ್ತಿನ ಬಗ್ಗೆ ಹತ್ತು ವರ್ಷಗಳು ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯ ಕಾರಾವಾಸದಿಂದ ದಂಡನೀಯವಾದ, ಭಾರತ ದಂಡ ಸಂಹಿತೆ (1860 ರ 45)ಯ ಮೇರೆಗಿನ ಯಾವುದೇ ಅಪರಾಧವನ್ನು ಮಾಡಿದರೆ, ಆಜೀವ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು;

(Vಎ) ಅನುಸೂಚಿತ ಜಾತಿಯ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನೆಂಬ ಅಥವಾ ಅಂಥ ಯಾವುದೇ ಸ್ವತ್ತು ಅಂಥ ಸದಸ್ಯನಿಗೆ ಸೇರಿದೆಯೆಂಬುದು ಗೊತ್ತಿದ್ದೂ, ಅಂಥ ವ್ಯಕ್ತಿಗೆ ಸಂಬಂಧಪಟ್ಟಂತೆ ಅಥವಾ ಅಂಥ ಸ್ವತ್ತಿಗೆ ಸಂಬಂಧಪಟ್ಟಂತೆ, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಅಪರಾಧವನ್ನು ಮಾಡಿದರೆ, ಅಂಥ ಅಪರಾಧಗಳಿಗೆ ಭಾರತ ದಂಡ ಸಂಹಿತೆ (1860 ರ 45)ಯ ಮೇರೆಗೆ ನಿರ್ದಿಷ್ಟಪಡಿಸಿರುವ ದಂಡನೆಯಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು;

(vi )ಈ ಅಧ್ಯಾಯದ ಮೇರೆಗಿನ ಅಪರಾಧವನ್ನು ಮಾಡಲಾಗಿದೆ ಎಂದು ತಿಳಿದೂ ಅಥವಾ ನಂಬಲು ಕಾರಣವನ್ನು ಹೊಂದಿದ್ದು ಕಾನೂನುಸಮ್ಮತ ದಂಡನೆಯಿಂದ ಅಪರಾಧಿಯನ್ನು ರಕ್ಷಿಸುವ ಉದ್ದೇಶದಿಂದ, ಆ ಅಪರಾಧವನ್ನು ಮಾಡಿರುವ ಬಗ್ಗೆ ಯಾವುದೇ ಸಾಕ್ಷ್ಯವು ಇಲ್ಲದಂತೆ ಮಾಡಿದರೆ ಅಥವಾ ಆ ಉದ್ದೇಶದಿಂದ ಆ ಅಪರಾಧಕ್ಕೆ ಸಂಬಂಧಿಸಿದಂತೆ ಅವನು ಸುಳ್ಳೆಂದು ತಿಳಿದಿರುವ ಅಥವಾ ಹಾಗೆಂದು ನಂಬಿರುವ ಯಾವುದೇ ಮಾಹಿತಿಯನ್ನು ಕೊಟ್ಟರೆ ಅ ಅಪರಾಧಕ್ಕಾಗಿ ಉಪಬಂಧಿಸಿರುವ ದಂಡನೆಯಿಂದ ದಂಡನೀಯನಾಗತಕ್ಕದ್ದು; ಅಥವಾ

(vi i) ಲೋಕ ನೌಕರನಾಗಿದ್ದು, ಈ ಪ್ರಕರಣದ ಮೇರೆಗೆ ಯಾವುದೇ ಅಪರಾಧವನ್ನು ಮಾಡಿದರೆ, ಒಂದು ವರ್ಷಕ್ಕಿಂತ ಕಡಿಮೆಯಿಲ್ಲದ ಆದರೆ ಆ ಅಪರಾಧಕ್ಕಾಗಿ ಉಪಬಂಧಿಸಿರುವ ದಂಡನೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ದಂಡನೀಯನಾಗತಕ್ಕದ್ದು.

**4. ಕರ್ತವ್ಯಗಳ ನಿರ್ಲಕ್ಷ್ಯತೆಗೆ ದಂಡನೆ.–** (1) ಅನುಸೂಚಿತ ಜಾತಿಯ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನಲ್ಲದ ಯಾರೇ ವ್ಯಕ್ತಿಯು, ಲೋಕ ನೌಕರನಾಗಿದ್ದು, ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಆತನು ನೆರವೇರಿಸಬೇಕೆಂದು ಅಗತ್ಯಪಡಿಸಿದ ಆತನ ಕರ್ತವ್ಯಗಳನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿದರೆ, ಆತನು ಆರು ತಿಂಗಳಿಗಿಂತ ಕಡಿಮೆಯಲ್ಲದ ಆದರೆ ಒಂದು ವರ್ಷಕ್ಕೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು.

(2) ಉಪ ಪ್ರಕರಣ (1)ರಲ್ಲಿ ಉಲ್ಲೇಖಿಸಿದ ಲೋಕ ನೌಕರನ ಕರ್ತವ್ಯಗಳಲ್ಲಿ,–

(ಎ) ಮಾಹಿತಿದಾರನು ಮೌಖಿಕವಾಗಿ ನೀಡಿದ ಮಾಹಿತಿಯನ್ನು ಪೊಲೀಸು ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯು ಲಿಖಿತ ರೂಪದಲ್ಲಿ ಬರೆದುಕೊಂಡ ನಂತರ ಮಾಹಿತಿದಾರನ ಸಹಿಯನ್ನು ಪಡೆದುಕೊಳ್ಳುವುದಕ್ಕೆ ಮುಂಚೆ ಅದನ್ನು ಅವನಿಗೆ ಓದಿ ಹೇಳುವುದು;

(ಬಿ) ಈ ಅಧಿನಿಯಮದ ಮತ್ತು ಇತರ ಸಂಬಂಧಪಟ್ಟ ಉಪಬಂಧಗಳ ಮೇರೆಗೆ ದೂರನ್ನು ಅಥವಾ ಪ್ರಥಮ ಮಾಹಿತಿ ವರದಿಯನ್ನು ನೋಂದಾಯಿಸುವುದು ಮತ್ತು ಈ ಅಧಿನಿಯಮದ ಯುಕ್ತ ಪ್ರಕರಣಗಳ ಮೇರೆಗೆ ಅದನ್ನು ನೋಂದಾಯಿಸುವುದು;

(ಸಿ) ದಾಖಲಿಸಿದ ಮಾಹಿತಿಯ ಒಂದು ಪ್ರತಿಯನ್ನು ಮಾಹಿತಿದಾರನಿಗೆ ಕೂಡಲೇ ಒದಗಿಸುವುದು;

(ಡಿ) ದೌರ್ಜನ್ಯಕ್ಕೊಳಗಾದವರ ಅಥವಾ ಸಾಕ್ಷಿದಾರರ ಹೇಳಿಕೆಯನ್ನು ದಾಖಲಿಸುವುದು;

(ಇ) ವಿಶೇಷ ನ್ಯಾಯಾಲಯದಲ್ಲಿ ಮತ್ತು ಪ್ರತ್ಯೇಕ ವಿಶೇಷ ನ್ಯಾಯಾಲಯದಲ್ಲಿ ವಿಚಾರಣೆಯನ್ನು ನಡೆಸುವುದಕ್ಕಾಗಿ ಆರೋಪ ಪಟ್ಟಿಯನ್ನು ಅರವತ್ತು ದಿನಗಳ ಅವಧಿಯೊಳಗೆ ದಾಖಲಿಸುವುದು ಮತ್ತು ಯಾವುದೇ ವಿಳಂಬವಾಗಿದ್ದರೆ ಲಿಖಿತ ವಿವರಣೆಯನ್ನು ದಾಖಲಿಸುವುದು;

(ಎಫ್) ಯಾವುದೇ ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ಸರಿಯಾಗಿ ಸಿದ್ಧಪಡಿಸುವುದು, ರಚಿಸುವುದು ಮತ್ತು ಭಾಷಾಂತರಿಸುವುದು;

(ಜಿ) ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಇತರ ಕರ್ತವ್ಯಗಳನ್ನು ನಿರ್ವಹಿಸುವುದು:

ಪರಂತು, ಲೋಕ ನೌಕರನ ಮೇಲಿನ ಆರೋಪಗಳನ್ನು ಆಡಳಿತಾತ್ಮಕ ವಿಚಾರಣೆಯ ನಂತರ ಮಾಡಿದ ಶಿಫಾರಸ್ಸಿನ ಮೇಲೆ ದಾಖಲಿಸತಕ್ಕದ್ದು

–ಇವುಗಳು ಒಳಗೊಳ್ಳತಕ್ಕದ್ದು.

(3) ವಿಶೇಷ ನ್ಯಾಯಾಲಯವು ಅಥವಾ ಪ್ರತ್ಯೇಕ ವಿಶೇಷ ನ್ಯಾಯಾಲಯವು, ಉಪ ಪ್ರಕರಣ (2)ರಲ್ಲಿ ಉಲ್ಲೇಖಿಸಿದ, ಲೋಕ ನೌಕರನ ಯಾವುದೇ ಕರ್ತವ್ಯಲೋಪವನ್ನು ಸಂಜ್ಞೇಯಕ್ಕೆ ತೆಗೆದುಕೊಂಡು ಆತನ ವಿರುದ್ಧ ದಂಡನೀಯ ವ್ಯವಹರಣೆಯನ್ನು ನಡೆಸಲು ನಿರ್ದೇಶನವನ್ನು ಕೊಡತಕ್ಕದ್ದು.

**5. ತರುವಾಯದ ಅಪರಾಧ ನಿರ್ಣಯಕ್ಕೆ ಹೆಚ್ಚಿನ ದಂಡನೆ.–** ಯಾರೇ ಆಗಲಿ, ಈ ಅಧ್ಯಾಯದ ಮೇರೆಗಿನ ಅಪರಾಧದ ಬಗ್ಗೆ ಈಗಾಗಲೇ ಅಪರಾಧಿ ಎಂದು ನಿರ್ಣೀತನಾಗಿದ್ದು, ಎರಡನೇ ಅಪರಾಧಕ್ಕಾಗಿ ಅಥವಾ ಆ ಎರಡನೇ ಅಪರಾಧದ ತರುವಾಯದ ಯಾವುದೇ ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣೀತನಾದರೆ, ಒಂದು

ವರ್ಷಕ್ಕಿಂತ ಕಡಿಮೆಯಿಲ್ಲದ ಆದರೆ, ಆ ಅಪರಾಧಕ್ಕಾಗಿ ಉಪಬಂಧಿಸಿರುವ ದಂಡನೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ದಂಡನೀಯನಾಗತಕ್ಕದ್ದು.

**6. ಭಾರತ ದಂಡ ಸಂಹಿತೆಯ ಕೆಲವು ಉಪಬಂಧಗಳ ಅನ್ವಯ.–** ಈ ಅಧಿನಿಯಮದ ಇತರ ಉಪಬಂಧಗಳಿಗೊಳಪಟ್ಟು, ಭಾರತ ದಂಡ ಸಂಹಿತೆಯ (1860ರ 45) ಪ್ರಕರಣ 34, ಅಧ್ಯಾಯ III, ಅಧ್ಯಾಯ IV, ಅಧ್ಯಾಯ V, ಅಧ್ಯಾಯ Vಎ, ಪ್ರಕರಣ 149 ಮತ್ತು ಅಧ್ಯಾಯ XXIIIರ ಉಪಬಂಧಗಳು, ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಈ ಅಧಿನಿಯಮದ ಉದ್ದೇಶಗಳಿಗಾಗಿ, ಅವು ಭಾರತ ದಂಡ ಸಂಹಿತೆಯ ಉದ್ದೇಶಗಳಿಗಾಗಿ ಅನ್ವಯವಾಗುವಂತೆಯೇ ಅನ್ವಯವಾಗತಕ್ಕದ್ದು.

**7. ಕೆಲವು ವ್ಯಕ್ತಿಗಳ ಸ್ವತ್ತಿನ ಮುಟ್ಟುಗೋಲು.–** (1) ಈ ಅಧ್ಯಾಯದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಬಗ್ಗೆ ಯಾರೇ ವ್ಯಕ್ತಿಯು ಅಪರಾಧಿ ಎಂದು ನಿರ್ಣೀತನಾಗಿರುವಲ್ಲಿ, ವಿಶೇಷ ನ್ಯಾಯಾಲಯವು, ಯಾವುದೇ ದಂಡನೆಯನ್ನು ಕೊಡುವುದರ ಜೊತೆಗೆ, ಲಿಖಿತ ಆದೇಶದ ಮೂಲಕ ಆ ಅಪರಾಧವನ್ನು ಮಾಡಲು ಉಪಯೋಗಿಸಿರುವ, ಆ ವ್ಯಕ್ತಿಗೆ ಸೇರಿದ ಚರ ಅಥವಾ ಸ್ಥಿರ ಅಥವಾ ಅವೆರಡೂ ಆಗಿರುವ ಯಾವುದೇ ಸ್ವತ್ತು ಸರ್ಕಾರಕ್ಕೆ ಮುಟ್ಟುಗೋಲಾಗತಕ್ಕದ್ದೆಂದು ಘೋಷಿಸಬಹುದು.

(2) ಈ ಅಧ್ಯಾಯದ ಮೇರೆಗಿನ ಯಾವುದೇ ಅಪರಾಧದ ಬಗ್ಗೆ ಯಾರೇ ವ್ಯಕ್ತಿಯು ಆಪಾದಿತನಾಗಿರುವಲ್ಲಿ, ಅವನಿಗೆ ಸೇರಿದ ಚರ ಅಥವಾ ಸ್ಥಿರ ಅಥವಾ ಅವೆರಡೂ ಆಗಿರುವ ಎಲ್ಲಾ ಅಥವಾ ಯಾವುದೇ ಸ್ವತ್ತನ್ನು ಅಂಥ ಅಧಿವಿಚಾರಣೆಯ ಕಾಲದಲ್ಲಿ ಜಪ್ತಿ ಮಾಡತಕ್ಕದೆಂದು ಅವನನ್ನು ಅಧಿವಿಚಾರಣೆ ಮಾಡುವ ಆ ವಿಶೇಷ ನ್ಯಾಯಾಲಯವು ಆದೇಶವನ್ನು ಮಾಡಲು ಅವಕಾಶವಿರತಕ್ಕದ್ದು ಮತ್ತು ಅಂಥ ಅಧಿವಿಚಾರಣೆಯು ಅಪರಾಧ ನಿರ್ಣಯದಲ್ಲಿ ಕೊನೆಗೊಳ್ಳುವಲ್ಲಿ ಹಾಗೆ ಜಪ್ತಿ ಮಾಡಿದ ಸ್ವತ್ತು, ಆ ಅಧ್ಯಾಯದ ಮೇರೆಗೆ ವಿಧಿಸಿದ ಯಾವುದೇ ಜುಲ್ಮಾನೆಯು ಅದನ್ನು ವಸೂಲು ಮಾಡುವ ಉದ್ದೇಶಕ್ಕಾಗಿ ಅಗತ್ಯವಿರುವಷ್ಟರ ಮಟ್ಟಿಗೆ ಮುಟ್ಟುಗೋಲಿಗೆ ಗುರಿಯಾಗತಕ್ಕದ್ದು.

**8. ಅಪರಾಧಗಳ ಬಗ್ಗೆ ಪೂರ್ವಭಾವನೆ.–** ಈ ಅಧ್ಯಾಯದ ಮೇರೆಗಿನ ಅಪರಾಧದ ಪ್ರಾಸಿಕ್ಯೂಷನ್ನಿನಲ್ಲಿ,–

(ಎ) ಈ ಅಧ್ಯಾಯದ ಮೇರೆಗಿನ ಅಪರಾಧವನ್ನು ಮಾಡಿರುವ ಬಗ್ಗೆ ಆಪಾದಿತನಾದ ಅಥವಾ ಅದನ್ನು ಎಸಗಿರುವನೆಂದು ಯುಕ್ತವಾಗಿ ಸಂದೇಶಿಸಲಾಗಿರುವ ವ್ಯಕ್ತಿಯು ಎಸಗಿದ ಅಪರಾಧಗಳಿಗೆ ಸಂಬಂಧಿಸಿದಂತೆ ಯಾವುದೇ ಹಣಕಾಸಿನ ಸಹಾಯವನ್ನು ಆಪಾದಿತನು ಕೊಟ್ಟನೆಂದು ರುಜುವಾತುಪಡಿಸಿದರೆ, ಆ ವಿಶೇಷ ನ್ಯಾಯಾಲಯವು, ತದ್ವಿರುದ್ಧವಾಗಿ ರುಜುವಾತಾದ ಹೊರತು, ಅಂಥ ವ್ಯಕ್ತಿಯು ಆ ಅಪರಾಧವನ್ನು ಮಾಡಲು ದುಷ್ಪ್ರೇರಿಸಿದ್ದನೆಂದು ಪೂರ್ವಭಾವನೆ ಮಾಡತಕ್ಕದ್ದು;

(ಬಿ) ಈ ಅಧ್ಯಾಯದ ಮೇರೆಗಿನ ಅಪರಾಧವನ್ನು ವ್ಯಕ್ತಿಗಳ ಒಂದು ಗುಂಪು ಮಾಡಿರುವುದೆಂದು ಮತ್ತು ಮಾಡಿರುವ ಅಪರಾಧವು ಭೂಮಿ ಅಥವಾ ಇತರ ಯಾವುದೇ ವಿಷಯಕ್ಕೆ ಸಂಬಂಧಿಸಿದ ಈಗಿರುವ

ಯಾವುದೇ ವಿವಾದದ ಪರಿಣಾಮವಾಗಿದೆ ಎಂದು ರುಜುವಾತಾದರೆ, ಆ ಅಪರಾಧವನ್ನು, ಏಕೋದ್ದೇಶವನ್ನು ಕಾರ್ಯಗತಗೊಳಿಸಲು ಅಥವಾ ಒಂದೇ ಗುರಿಯನ್ನು ಸಾಧಿಸಲು ಮಾಡಲಾಗಿದೆ ಎಂದು ಪೂರ್ವಭಾವನೆ ಮಾಡತಕ್ಕದ್ದು;

(ಸಿ) ದೌರ್ಜನ್ಯಕ್ಕೊಳಗಾದ ವ್ಯಕ್ತಿಯ ಬಗ್ಗೆ ಅಥವಾ ಆತನ ಕುಟುಂಬದ ಬಗ್ಗೆ ಆಪಾದಿತನು ಸ್ವತಃ ತಿಳುವಳಿಕೆ ಹೊಂದಿದ್ದರೆ, ತದ್ವಿರುದ್ಧವಾದುದು ರುಜುವಾತಾದ ಹೊರತು ಆ ಆಪಾದಿತನಿಗೆ ದೌರ್ಜನ್ಯಕ್ಕೊಳಗಾದ ವ್ಯಕ್ತಿಯ ಜಾತಿ ಮತ್ತು ಬುಡಕಟ್ಟಿನ ಬಗ್ಗೆ ತಿಳುವಳಿಕೆ ಇತ್ತೆಂದು ನ್ಯಾಯಾಲಯವು ಪೂರ್ವಭಾವನೆ ಮಾಡತಕ್ಕದ್ದು.

9. **ಅಧಿಕಾರ ಪ್ರದಾನ.–** (1) ಸಂಹಿತೆಯಲ್ಲಿ ಅಥವಾ ಈ ಅಧಿನಿಯಮದ ಯಾವುದೇ ಇತರ ಉಪಬಂಧದಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು ಯಾವುದೇ ಜಿಲ್ಲೆಯಲ್ಲಿ ಅಥವಾ ಅದರ ಭಾಗದಲ್ಲಿ,–

(ಎ) ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ತಡೆಗಟ್ಟುವುದಕ್ಕಾಗಿ ಮತ್ತು ಅದನ್ನು ನಿಭಾಯಿಸುವುದಕ್ಕಾಗಿ; ಅಥವಾ

(ಬಿ) ಈ ಅಧಿನಿಯಮದ ಮೇರೆಗಿನ ಯಾವುದೇ ಪ್ರಕರಣ ಅಥವಾ ಪ್ರಕರಣಗಳ ವರ್ಗ ಅಥವಾ ಸಮೂಹಕ್ಕಾಗಿ

– ಹಾಗೆ ಮಾಡುವುದು ಅವಶ್ಯ ಅಥವಾ ವಿಹಿತವೆಂದು ಪರ್ಯಾಲೋಚಿಸಿದರೆ ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ರಾಜ್ಯ ಸರ್ಕಾರದ ಯಾರೇ ಅಧಿಕಾರಿಗೆ ಅಂಥ ಜಿಲ್ಲೆ ಅಥವಾ ಅದರ ಭಾಗದಲ್ಲಿ ಅಥವಾ ಸಂದರ್ಭಾನುಸಾರ ಅಂಥ ಪ್ರಕರಣ ಅಥವಾ ಪ್ರಕರಣಗಳ ವರ್ಗ ಅಥವಾ ಸಮೂಹಕ್ಕಾಗಿ ಸಂಹಿತೆಯ ಮೇರೆಗೆ ಪೊಲೀಸು ಅಧಿಕಾರಿಯು ಚಲಾಯಿಸಬಹುದಾದ ಅಧಿಕಾರಗಳನ್ನು ಮತ್ತು ವಿಶೇಷವಾಗಿ ದಸ್ತಗಿರಿ, ತನಿಖೆ ಮತ್ತು ಯಾವುದೇ ವಿಶೇಷ ನ್ಯಾಯಾಲಯದ ಮುಂದೆ ವ್ಯಕ್ತಿಗಳನ್ನು ಪ್ರಾಸಿಕ್ಯೂಷನ್ನಿಗೆ ಗುರಿಪಡಿಸುವ ಅಧಿಕಾರಗಳನ್ನು ಪ್ರದಾನ ಮಾಡಬಹುದು.

(2) ಎಲ್ಲಾ ಪೊಲೀಸ್ ಅಧಿಕಾರಿಗಳು ಮತ್ತು ಸರ್ಕಾರದ ಇತರ ಎಲ್ಲಾ ಅಧಿಕಾರಿಗಳು ಉಪ ಪ್ರಕರಣ (1)ರಲ್ಲಿ ಉಲ್ಲೇಖಿಸಿದ ಅಧಿಕಾರಿಗೆ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ, ಯೋಜನೆ ಅಥವಾ ಆದೇಶದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಸಹಾಯ ಮಾಡತಕ್ಕದ್ದು.

(3) ಸಂಹಿತೆಯ ಉಪಬಂಧಗಳು, ಸಾಧ್ಯವಾದಷ್ಟು ಮಟ್ಟಿಗೆ, ಉಪ ಪ್ರಕರಣ (1)ರ ಮೇರೆಗೆ ಒಬ್ಬ ಅಧಿಕಾರಿಯು ಅಧಿಕಾರಗಳನ್ನು ಚಲಾಯಿಸುವುದಕ್ಕೆ ಅನ್ವಯವಾಗತಕ್ಕದ್ದು.

## ಅಧ್ಯಾಯ III

### ಗಡಿಪಾರು

**10. ಅಪರಾಧವನ್ನು ಮಾಡುವ ಸಂಭವವಿರುವ ವ್ಯಕ್ತಿಯ ಸ್ಥಳಾಂತರಣ.–** (1) ದೂರು ಅಥವಾ ಪೊಲೀಸು ವರದಿಯ ಮೇಲೆ ವಿಶೇಷ ನ್ಯಾಯಾಲಯಕ್ಕೆ ಸಂವಿಧಾನದ 244ನೇ ಅನುಚ್ಛೇದದಲ್ಲಿ ಉಲ್ಲೇಖಿಸಿದ "ಅನುಸೂಚಿತ ಪ್ರದೇಶದಲ್ಲಿ" ಅಥವಾ "ಬುಡಕಟ್ಟು ಪ್ರದೇಶಗಳಲ್ಲಿ" ಅಥವಾ ಪ್ರಕರಣ 21ರ ಉಪ ಪ್ರಕರಣ (2)ರ (vii)ನೇ ಖಂಡದ ಉಪಬಂಧಗಳ ಅಡಿಯಲ್ಲಿ ಗುರುತಿಸಿದ ಯಾವುದೇ ಪ್ರದೇಶದಲ್ಲಿ ಒಳಗೊಂಡಿರುವ ಯಾವುದೇ ಪ್ರದೇಶದಲ್ಲಿ ಈ ಅಧಿನಿಯಮದ ಅಧ್ಯಾಯ IIರ ಮೇರೆಗಿನ ಅಪರಾಧವನ್ನು ಒಬ್ಬ ವ್ಯಕ್ತಿಯು ಮಾಡುವ ಸಂಭವವಿದೆಯೆಂದು ಮನದಟ್ಟಾಗಿರುವಲ್ಲಿ, ಅದು ಲಿಖಿತ ಆದೇಶದ ಮೂಲಕ ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶದ ಪರಿಮಿತಿಗಳಿಂದಾಚೆಗೆ, ಅಂಥ ಮಾರ್ಗದ ಮೂಲಕ ಮತ್ತು ಅಂಥ ಕಾಲದೊಳಗೆ ಅಂಥ ವ್ಯಕ್ತಿಯು ಸ್ಥಳಾಂತರಣಗೊಳ್ಳಬೇಕೆಂದು ಮತ್ತು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಮೂರು ವರ್ಷಗಳನ್ನು ಮೀರದ ಅವಧಿಗಾಗಿ ಅವನು ಯಾವ ಪ್ರದೇಶದಿಂದ ಸ್ಥಳಾಂತರಣಗೊಳ್ಳಬೇಕೆಂದು ನಿರ್ದೇಶಿಸಲಾಗಿದ್ದಿತೋ ಆ ಪ್ರದೇಶಕ್ಕೆ ಹಿಂದಿರುಗಕೂಡದೆಂದು ನಿರ್ದೇಶಿಸಬಹುದು.

(2) ವಿಶೇಷ ನ್ಯಾಯಾಲಯವು, ಉಪ ಪ್ರಕರಣ (1)ರ ಮೇರೆಗಿನ ಆದೇಶದೊಂದಿಗೆ ಆ ಉಪ ಪ್ರಕರಣದ ಮೇರೆಗೆ ನಿರ್ದೇಶಿಸಲಾದ ವ್ಯಕ್ತಿಗೆ ಅಂಥ ಆದೇಶವನ್ನು ಮಾಡಿರುವಂಥ ಕಾರಣಗಳನ್ನು ತಿಳಿಸತಕ್ಕದ್ದು.

(3) ವಿಶೇಷ ನ್ಯಾಯಾಲಯವು, ಉಪ ಪ್ರಕರಣ (1)ರ ಮೇರೆಗೆ ಮಾಡಿದ ಆದೇಶವನ್ನು, ಆ ಆದೇಶದ ದಿನಾಂಕದಿಂದ ಮೂವತ್ತು ದಿವಸಗಳೊಳಗೆ ಯಾವ ವ್ಯಕ್ತಿಯ ವಿರುದ್ಧ ಅಂಥ ಆದೇಶವನ್ನು ಮಾಡಲಾಗಿದೆಯೋ ಅವನು ಅಥವಾ ಅವನ ಪರವಾಗಿ ಯಾರೇ ಇತರ ವ್ಯಕ್ತಿಯು ಮಾಡಿಕೊಂಡ ಮನವಿಯ ಮೇಲೆ ಬರಹದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ರದ್ದುಪಡಿಸಬಹುದು ಅಥವಾ ಮಾರ್ಪಾಟುಗೊಳಿಸಬಹುದು.

**11. ವ್ಯಕ್ತಿಯು ಒಂದು ಪ್ರದೇಶದಿಂದ ಸ್ಥಳಾಂತರಣಗೊಳ್ಳಲು ತಪ್ಪಿದರೆ ಮತ್ತು ಸ್ಥಳಾಂತರಣಗೊಂಡ ತರುವಾಯ ಆ ಪ್ರದೇಶದೊಳಗೆ ಪ್ರವೇಶಿಸಿದರೆ ಪ್ರಕ್ರಿಯೆ.–** (1) ಯಾವುದೇ ಪ್ರದೇಶದಿಂದ ಸ್ಥಳಾಂತರಣಗೊಳ್ಳಬೇಕೆಂದು ಪ್ರಕರಣ 10ರ ಮೇರೆಗೆ ಯಾವ ವ್ಯಕ್ತಿಗೆ ನಿರ್ದೇಶನವನ್ನು ನೀಡಲಾಗಿದೆಯೋ ಆ ವ್ಯಕ್ತಿಯು ಉಪ ಪ್ರಕರಣ (2)ರ ಮೇರೆಗೆ ವಿಶೇಷ ನ್ಯಾಯಾಲಯದ ಲಿಖಿತ ಅನುಮತಿಯೊಂದಿಗೆ ಹೊರತು,–

(ಎ) ನಿರ್ದೇಶಿಸಲಾಗಿರುವಂತೆ ಸ್ಥಳಾಂತರಣಗೊಳ್ಳಲು ತಪ್ಪಿದರೆ; ಅಥವಾ

(ಬಿ) ಹಾಗೆ ಸ್ಥಳಾಂತರಣಗೊಂಡು, ಆದೇಶದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಂಥ ಪ್ರದೇಶದೊಳಕ್ಕೆ ಪ್ರವೇಶಿಸಿದರೆ

– ಆ ವಿಶೇಷ ನ್ಯಾಯಾಲಯವು ಅವನನ್ನು ದಸ್ತಗಿರಿ ಮಾಡಿಸಬಹುದು ಮತ್ತು ಅವನನ್ನು ಪೊಲೀಸು ಅಭಿರಕ್ಷೆಯಲ್ಲಿ ವಿಶೇಷ ನ್ಯಾಯಾಲಯವು ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶಕ್ಕೆ ಸ್ಥಳಾಂತರಿಸಬಹುದು.

(2) ವಿಶೇಷ ನ್ಯಾಯಾಲಯವು, ಲಿಖಿತ ಆದೇಶದ ಮೂಲಕ, ಯಾವ ವ್ಯಕ್ತಿಗೆ ಸಂಬಂಧಿಸಿದಂತೆ, ಪ್ರಕರಣ 10ರ ಮೇರೆಗೆ ಆದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿಯು ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ತಾತ್ಕಾಲಿಕ ಅವಧಿಗಾಗಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು ಯಾವ ಪ್ರದೇಶದಿಂದ ಅವನು ಸ್ಥಳಾಂತರಣಗೊಳ್ಳಬೇಕೆಂದು ಅವನಿಗೆ ನಿರ್ದೇಶಿಸಲಾಗಿದ್ದಿತೋ ಆ ಪ್ರದೇಶಕ್ಕೆ ಹಿಂದಿರುಗಲು ಅನುಮತಿಸಬಹುದು ಮತ್ತು ಅದು ವಿಧಿಸಿರುವ ಷರತ್ತುಗಳ ಯುಕ್ತ ಪಾಲನೆಗಾಗಿ ಜಾಮೀನು ಸಹಿತ ಅಥವಾ ರಹಿತ ಬಾಂಡನ್ನು ಬರೆದುಕೊಡಲು ಅವನನ್ನು ಅಗತ್ಯಪಡಿಸಬಹುದು.

(3) ವಿಶೇಷ ನ್ಯಾಯಾಲಯವು ಅಂಥ ಯಾವುದೇ ಅನುಮತಿಯನ್ನು ಯಾವುದೇ ಕಾಲದಲ್ಲಿ ರದ್ದುಗೊಳಿಸಬಹುದು.

(4) ಅಂಥ ಅನುಮತಿಯೊಂದಿಗೆ ಯಾವ ಪ್ರದೇಶದಿಂದ ಸ್ಥಳಾಂತರಣಗೊಳ್ಳಬೇಕೆಂದು ಅವನನ್ನು ನಿರ್ದೇಶಿಸಲಾಗಿದ್ದಿತ್ತೋ ಆ ಪ್ರದೇಶಕ್ಕೆ ಹಿಂದಿರುಗುವ ಆ ಯಾರೇ ವ್ಯಕ್ತಿಯು, ವಿಧಿಸಿರುವ ಷರತ್ತುಗಳನ್ನು ಪಾಲಿಸತಕ್ಕದ್ದು ಮತ್ತು ಹಿಂದಿರುಗಲು ಅವನಿಗೆ ಅನುಮತಿಯನ್ನು ಕೊಟ್ಟಿದ್ದಂಥ ತಾತ್ಕಾಲಿಕ ಅವಧಿಯು ಮುಕ್ತಾಯವಾದ ಮೇಲೆ ಅಥವಾ ಅಂಥ ತಾತ್ಕಾಲಿಕ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಅಂಥ ಅನುಮತಿಯನ್ನು ರದ್ದುಗೊಳಿಸಿದ ಮೇಲೆ ಅವನು ಅಂಥ ಪ್ರದೇಶದಿಂದ ಆಚೆಗೆ ಸ್ಥಳಾಂತರಣಗೊಳ್ಳತಕ್ಕದ್ದು ಮತ್ತು ಹೊಸ ಅನುಮತಿಯಿಲ್ಲದೆ ಪ್ರಕರಣ 10ರ ಮೇರೆಗೆ ನಿರ್ದಿಷ್ಟಪಡಿಸಿದ ಮುಕ್ತಾಯವಾಗದ ಅವಧಿಯೊಳಗೆ ಅಲ್ಲಿಗೆ ಹಿಂದಿರುಗತಕ್ಕದ್ದಲ್ಲ.

(5) ಯಾರೇ ವ್ಯಕ್ತಿಯು, ವಿಧಿಸಿದ ಯಾವುದೇ ಷರತ್ತನ್ನು ಪಾಲಿಸಲು ಅಥವಾ ತದನುಸಾರವಾಗಿ ಸ್ಥಳಾಂತರಣಗೊಳ್ಳಲು ತಪ್ಪಿದರೆ ಅಥವಾ ಹಾಗೆ ಸ್ಥಳಾಂತರಣಗೊಂಡ ಮೇಲೆ ಹೊಸ ಅನುಮತಿ ಇಲ್ಲದೆ ಅಂಥ ಪ್ರದೇಶಕ್ಕೆ ಹಿಂದಿರುಗಿದರೆ ವಿಶೇಷ ನ್ಯಾಯಾಲಯವು, ಅವನನ್ನು ದಸ್ತಗಿರಿ ಮಾಡಿಸಬಹುದು ಮತ್ತು ಆ ಪ್ರದೇಶದ ಹೊರಗಡೆ ಆ ವಿಶೇಷ ನ್ಯಾಯಾಲಯವು ನಿರ್ದಿಷ್ಟಪಡಿಸಬಹುದಾದಂಥ ಸ್ಥಳಕ್ಕೆ ಪೊಲೀಸ್ ಅಭಿರಕ್ಷೆಯಲ್ಲಿ ಸ್ಥಳಾಂತರಿಸಬಹುದು.

**12. ಪ್ರಕರಣ 10ರ ಮೇರೆಗೆ ಯಾರ ವಿರುದ್ಧ ಆದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿಗಳ ಅಳತೆಗಳು ಮತ್ತು ಛಾಯಾಚಿತ್ರಗಳು ಇತ್ಯಾದಿಗಳನ್ನು ತೆಗೆದುಕೊಳ್ಳುವುದು.–** (1) ಪ್ರಕರಣ 10ರ ಮೇರೆಗೆ ಯಾರ ವಿರುದ್ಧ ಆದೇಶವನ್ನು ಮಾಡಲಾಗಿದೆಯೋ, ಆ ಪ್ರತಿಯೊಬ್ಬ ವ್ಯಕ್ತಿಯು, ವಿಶೇಷ ನ್ಯಾಯಾಲಯವು ಅಗತ್ಯಪಡಿಸಿದರೆ, ಅವನ ಅಳತೆಗಳು ಮತ್ತು ಛಾಯಾಚಿತ್ರಗಳನ್ನು ಪೊಲೀಸ್ ಅಧಿಕಾರಿಯು ತೆಗೆದುಕೊಳ್ಳಲು ಅವಕಾಶ ಮಾಡಿಕೊಡತಕ್ಕದ್ದು.

(2) ಉಪ ಪ್ರಕರಣ (1)ರಲ್ಲಿ ಉಲ್ಲೇಖಿಸಿದ ಯಾರೇ ವ್ಯಕ್ತಿಯು, ಅವನ ಅಳತೆಗಳನ್ನು ಅಥವಾ ಛಾಯಾಚಿತ್ರಗಳನ್ನು ತೆಗೆದುಕೊಳ್ಳಲು ಅವಕಾಶ ಮಾಡಿಕೊಡಲು ಅಗತ್ಯಪಡಿಸಿರುವಾಗ ಅಂಥ ಅಳತೆಗಳು ಅಥವಾ ಛಾಯಾಚಿತ್ರಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಲು ಪ್ರತಿರೋಧಿಸಿದರೆ ಅಥವಾ ನಿರಾಕರಿಸಿದರೆ ಅವುಗಳನ್ನು ತೆಗೆದುಕೊಳ್ಳುವುದನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕೆ ಎಲ್ಲಾ ಅವಶ್ಯ ಸಾಧನಗಳನ್ನು ಉಪಯೋಗಿಸುವುದು ಕಾನೂನುಸಮ್ಮತವಾಗಿರತಕ್ಕದ್ದು.

(3) ಉಪ ಪ್ರಕರಣ (2)ರ ಮೇರೆಗೆ ಅಳತೆಗಳನ್ನು ಅಥವಾ ಛಾಯಾಚಿತ್ರಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರತಿರೋಧಿಸುವುದು ಅಥವಾ ಅದಕ್ಕೆ ಅವಕಾಶ ಮಾಡಿಕೊಡಲು ನಿರಾಕರಿಸುವುದು, ಭಾರತ ದಂಡ ಸಂಹಿತೆ (1860ರ 45) ಯ ಪ್ರಕರಣ 186ರ ಮೇರೆಗೆ ಅಪರಾಧವಾಗಿರುವುದಾಗಿ ಭಾವಿಸತಕ್ಕದ್ದು.

(4) ಪ್ರಕರಣ 10ರ ಮೇರೆಗೆ ಆದೇಶವನ್ನು ರದ್ದುಗೊಳಿಸಿರುವಲ್ಲಿ, ಉಪ ಪ್ರಕರಣ (2)ರ ಮೇರೆಗೆ ತೆಗೆದುಕೊಂಡ ಎಲ್ಲಾ ಅಳತೆಗಳು ಮತ್ತು ಎಲ್ಲಾ ಛಾಯಾಚಿತ್ರಗಳನ್ನು (ಪ್ರತಿ ಛಾಯೆಗಳನ್ನು ಒಳಗೊಂಡು) ನಾಶಪಡಿಸತಕ್ಕದ್ದು ಅಥವಾ ಅವುಗಳನ್ನು ಯಾರ ವಿರುದ್ಧ ಅಂಥ ಆದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿಗೆ ಕೊಡತಕ್ಕದ್ದು.

**13. ಪ್ರಕರಣ 10ರ ಮೇರೆಗಿನ ಆದೇಶವನ್ನು ಪಾಲಿಸದೇ ಇರುವುದಕ್ಕಾಗಿ ದಂಡ.–** ಪ್ರಕರಣ 10ರ ಮೇರೆಗೆ ಮಾಡಿದ ವಿಶೇಷ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಒಂದು ವರ್ಷಕ್ಕೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದು.

## ಅಧ್ಯಾಯ IV

## ವಿಶೇಷ ನ್ಯಾಯಾಲಯಗಳು

**14. ವಿಶೇಷ ನ್ಯಾಯಾಲಯ ಮತ್ತು ಪ್ರತ್ಯೇಕ ವಿಶೇಷ ನ್ಯಾಯಾಲಯ.–** (1) ತ್ವರಿತವಾಗಿ ಅಧಿವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯವರ ಸಹಮತಿಯೊಂದಿಗೆ, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಒಂದು ಅಥವಾ ಹೆಚ್ಚು ಜಿಲ್ಲೆಗಳಿಗಾಗಿ ಒಂದು ಪ್ರತ್ಯೇಕ ವಿಶೇಷ ನ್ಯಾಯಾಲಯವನ್ನು ಸ್ಥಾಪಿಸತಕ್ಕದ್ದು:

ಪರಂತು, ಜಿಲ್ಲೆಗಳಲ್ಲಿ ಈ ಅಧಿನಿಯಮದ ಮೇರೆಗೆ ಕಡಿಮೆ ಸಂಖ್ಯೆಯಲ್ಲಿ ಮೊಕದ್ದಮೆಗಳು ದಾಖಲಾಗಿದ್ದರೆ, ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯವರ ಸಹಮತಿ ಪಡೆದುಕೊಂಡು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮೇರೆಗೆ ಅಪರಾಧಗಳ ಅಧಿವಿಚಾರಣೆ ಮಾಡುವುದಕ್ಕೆ ಅಂಥ ಜಿಲ್ಲೆಗಳಿಗಾಗಿ ಸೆಷನ್ಸ್ ನ್ಯಾಯಾಲಯವನ್ನು ವಿಶೇಷ ನ್ಯಾಯಾಲಯವೆಂದು ನಿರ್ದಿಷ್ಟಪಡಿಸತಕ್ಕದ್ದು:

ಮತ್ತು ಪರಂತು, ಹಾಗೆ ಸ್ಥಾಪನೆಗೊಂಡ ಅಥವಾ ನಿರ್ದಿಷ್ಟಪಡಿಸಿದ ನ್ಯಾಯಾಲಯಗಳು ಈ ಅಧಿನಿಯಮದ ಮೇರೆಗೆ ನೇರವಾಗಿ ಅಪರಾಧಗಳನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳುವ ಅಧಿಕಾರವನ್ನು ಹೊಂದಿರತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ದಾಖಲಾದ ಮೊಕದ್ದಮೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಎರಡು ತಿಂಗಳ ಅವಧಿಯೊಳಗಾಗಿ ವಿಲೆ ಮಾಡುವುದನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕೆ ಸಾಕಷ್ಟು ಸಂಖ್ಯೆಯ ನ್ಯಾಯಾಲಯಗಳನ್ನು ಸ್ಥಾಪಿಸುವುದು ರಾಜ್ಯ ಸರ್ಕಾರದ ಕರ್ತವ್ಯವಾಗಿರತ್ತಕ್ಕದ್ದು.

(3) ವಿಶೇಷ ನ್ಯಾಯಾಲಯದಲ್ಲಿ ಅಥವಾ ಪ್ರತ್ಯೇಕ ವಿಶೇಷ ನ್ಯಾಯಾಲಯದಲ್ಲಿ ಆಗುತ್ತಿರುವ ಅಧಿವಿಚಾರಣೆಯಲ್ಲಿ, ನ್ಯಾಯಾಲಯದಲ್ಲಿ ಹಾಜರಿರುವ ಎಲ್ಲಾ ಸಾಕ್ಷಿದಾರರ ಪರೀಕ್ಷೆ ಆಗುವವರೆಗೆ, ವಿಶೇಷ ನ್ಯಾಯಾಲಯಕ್ಕೆ ಅಥವಾ ಪ್ರತ್ಯೇಕ ವಿಶೇಷ ನ್ಯಾಯಾಲಯಕ್ಕೆ ಮುಂದಿನ ದಿನ ಮೀರಿ ವ್ಯವಹರಣೆಯನ್ನು ಮುಂದಕ್ಕೆ ಹಾಕುವುದು ಅವಶ್ಯಕವೆಂದು ಕಂಡುಬಂದರೆ ಅದರ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿದ ಹೊರತು, ಪ್ರತಿಯೊಂದು ವ್ಯವಹರಣೆಯನ್ನು ಪ್ರತಿದಿನವೂ ಮುಂದುವರಿಸತಕ್ಕದ್ದು:

ಪರಂತು, ಅಧಿವಿಚಾರಣೆಯು ಈ ಅಧಿನಿಯಮದ ಮೇರೆಗಿನ ಅಪರಾಧಕ್ಕೆ ಸಂಬಂಧಪಟ್ಟಿದ್ದರೆ, ಅಧಿವಿಚಾರಣೆಯನ್ನು ಸಾಧ್ಯವಾದಷ್ಟು ಮಟ್ಟಿಗೆ, ಆರೋಪ ಪಟ್ಟಿಯನ್ನು ದಾಖಲು ಮಾಡಿದ ದಿನಾಂಕದಿಂದ ಎರಡು ತಿಂಗಳ ಅವಧಿಯೊಳಗಾಗಿ ಪೂರ್ಣಗೊಳಿಸತಕ್ಕದ್ದು.

## ರಾಜ್ಯ ತಿದ್ದುಪಡಿಗಳು

**ಕರ್ನಾಟಕ**

**ಪ್ರಕರಣ 14ರ ತಿದ್ದುಪಡಿ.–** ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ, 1989 (1989ರ ಕೇಂದ್ರ ಅಧಿನಿಯಮ ಸಂಖ್ಯೆ 33)ರ ಪ್ರಕರಣ 14ರಲ್ಲಿ, "ಈ ಅಧಿನಿಯಮದ ಮೇರೆಗೆ ಅಪರಾಧಗಳ ಅಧಿವಿಚಾರಣೆ ಮಾಡುವುದಕ್ಕೆ" ಎಂಬ ಪದಗಳ ಬದಲಾಗಿ, "ಮೂಲ ಅಧಿಕಾರವ್ಯಾಪ್ತಿಯ ನ್ಯಾಯಾಲಯವಾಗಿ ಈ ಅಧಿನಿಯಮದ ಮೇರೆಗೆ ಅಪರಾಧಗಳನ್ನು ಸಂಜ್ಞೇಯಕ್ಕೆ ತೆಗೆದುಕೊಳ್ಳುವುದಕ್ಕೆ ಮತ್ತು ಅಂಥ ಅಪರಾಧಗಳ ಅಧಿವಿಚಾರಣೆ ಮಾಡುವುದಕ್ಕೆ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

[2003ರ ಕರ್ನಾಟಕ ಅಧಿನಿಯಮ 35, ಪ್ರ.2]

**14ಎ. ಅಪೀಲುಗಳು.–** (1) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, ವಿಶೇಷ ನ್ಯಾಯಾಲಯವು ಅಥವಾ ಪ್ರತ್ಯೇಕ ವಿಶೇಷ ನ್ಯಾಯಾಲಯವು ವಿಚಾರಣಾವಧಿಯಲ್ಲಿ ನೀಡಿದ ಮಧ್ಯಕಾಲೀನ ಆದೇಶವನ್ನು ಹೊರತುಪಡಿಸಿ, ನೀಡಿದ ಆ ಯಾವುದೇ ತೀರ್ಪಿನ, ಶಿಕ್ಷೆಯ ಅಥವಾ ಆದೇಶದ

ಮೇಲೆ ವಾಸ್ತವಾಂಶಗಳು ಮತ್ತು ಕಾನೂನು ಅಂಶಗಳು ಎರಡನ್ನೂ ಕುರಿತಂತೆ ಉಚ್ಚ ನ್ಯಾಯಾಲಯಕ್ಕೆ ಅಪೀಲನ್ನು ಸಲ್ಲಿಸತಕ್ಕದ್ದು.

(2) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಪ್ರಕರಣ 378ರ ಉಪ ಪ್ರಕರಣ (3)ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, ವಿಶೇಷ ನ್ಯಾಯಾಲಯವು ಅಥವಾ ಪ್ರತ್ಯೇಕ ವಿಶೇಷ ನ್ಯಾಯಾಲಯವು ಜಾಮೀನು ಮಂಜೂರು ಮಾಡಿದ ಆದೇಶದ ವಿರುದ್ಧ ಅಥವಾ ಜಾಮೀನು ನಿರಾಕರಿಸಿದ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯಕ್ಕೆ ಅಪೀಲನ್ನು ಸಲ್ಲಿಸತಕ್ಕದ್ದು.

(3) ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲನ್ನು, ತೀರ್ಪಿನ, ಶಿಕ್ಷೆಯ ಅಥವಾ ಆದೇಶದ ದಿನಾಂಕದಿಂದ ತೊಂಭತ್ತು ದಿನಗಳ ಅವಧಿಯೊಳಗಾಗಿ ಸಲ್ಲಿಸತಕ್ಕದ್ದು:

ಪರಂತು, ತೊಂಭತ್ತು ದಿನಗಳೊಳಗೆ ಅಪೀಲನ್ನು ಸಲ್ಲಿಸದಿರುವುದಕ್ಕೆ ಅಪೀಲುದಾರನಿಗೆ ಸಾಕಷ್ಟು ಕಾರಣಗಳು ಇದ್ದವೆಂದು ಉಚ್ಚ ನ್ಯಾಯಾಲಯಕ್ಕೆ ಮನದಟ್ಟಾದರೆ, ಸದರಿ ತೊಂಭತ್ತು ದಿನಗಳ ಅವಧಿ ಮುಕ್ತಾಯದ ನಂತರವೂ ಉಚ್ಚ ನ್ಯಾಯಾಲಯವು ಅಪೀಲನ್ನು ಪುರಸ್ಕರಿಸಬಹುದು:

ಮತ್ತು ಪರಂತು, ಯಾವುದೇ ಅಪೀಲನ್ನು, ಒಂದು ನೂರಾ ಎಂಭತ್ತು ದಿನಗಳ ಅವಧಿಯು ಮುಕ್ತಾಯದ ನಂತರ ಪುರಸ್ಕರಿಸತಕ್ಕದ್ದಲ್ಲ.

(4) ಉಪ ಪ್ರಕರಣ (1)ರ ಮೇರೆಗೆ ಸಲ್ಲಿಸಿದ ಪ್ರತಿಯೊಂದು ಅಪೀಲನ್ನು, ಸಾಧ್ಯವಾಗಬಹುದಾದಷ್ಟು ಮಟ್ಟಿಗೆ, ಅಪೀಲು ಅಂಗೀಕಾರವಾದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಇತ್ಯರ್ಥ ಮಾಡತಕ್ಕದ್ದು.

**15. ವಿಶೇಷ ಸರ್ಕಾರಿ ಪ್ರಾಸಿಕ್ಯೂಟರ್ ಮತ್ತು ಪ್ರತ್ಯೇಕ ಸರ್ಕಾರಿ ಪ್ರಾಸಿಕ್ಯೂಟರ್.–** (1) ರಾಜ್ಯ ಸರ್ಕಾರವು, ಪ್ರತಿಯೊಂದು ವಿಶೇಷ ನ್ಯಾಯಾಲಯಕ್ಕಾಗಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಆ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ನಡೆಸುವ ಉದ್ದೇಶಕ್ಕಾಗಿ ವಿಶೇಷ ಸರ್ಕಾರಿ ಪ್ರಾಸಿಕ್ಯೂಟರ್‌ನನ್ನು ನಿರ್ದಿಷ್ಟಪಡಿಸತಕ್ಕದ್ದು ಅಥವಾ ಏಳು ವರ್ಷಗಳಿಗೆ ಕಡಿಮೆ ಇಲ್ಲದಂತೆ ನ್ಯಾಯವಾದಿಯಾಗಿ ವೃತ್ತಿನಿರತನಾಗಿರುವ ಒಬ್ಬ ನ್ಯಾಯವಾದಿಯನ್ನು ವಿಶೇಷ ಸರ್ಕಾರಿ ಪ್ರಾಸಿಕ್ಯೂಟರ್‌ನನ್ನಾಗಿ ನೇಮಕ ಮಾಡತಕ್ಕದ್ದು.

(2) ರಾಜ್ಯ ಸರ್ಕಾರವು, ಪ್ರತಿಯೊಂದು ಪ್ರತ್ಯೇಕ ವಿಶೇಷ ನ್ಯಾಯಾಲಯಕ್ಕಾಗಿ, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಆ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ನಡೆಸುವ ಉದ್ದೇಶಕ್ಕಾಗಿ, ಪ್ರತ್ಯೇಕ ವಿಶೇಷ ಸರ್ಕಾರಿ ಪ್ರಾಸಿಕ್ಯೂಟರ್‌ನನ್ನು ನಿರ್ದಿಷ್ಟಪಡಿಸತಕ್ಕದ್ದು ಅಥವಾ ಏಳು ವರ್ಷಗಳಿಗೆ ಕಡಿಮೆ ಇಲ್ಲದಂತೆ ನ್ಯಾಯವಾದಿಯಾಗಿ ವೃತ್ತಿನಿರತನಾಗಿರುವ ಒಬ್ಬ ನ್ಯಾಯವಾದಿಯನ್ನು ಪ್ರತ್ಯೇಕ ವಿಶೇಷ ಸರ್ಕಾರಿ ಪ್ರಾಸಿಕ್ಯೂಟರ್‌ನನ್ನಾಗಿ ನೇಮಕ ಮಾಡತಕ್ಕದ್ದು.

## ಅಧ್ಯಾಯ IV ಎ

## ದೌರ್ಜನ್ಯಕ್ಕೊಳಗಾದವರ ಮತ್ತು ಸಾಕ್ಷಿದಾರರ ಹಕ್ಕುಗಳು

**15ಎ. ದೌರ್ಜನ್ಯಕ್ಕೊಳಗಾದವರ ಮತ್ತು ಸಾಕ್ಷಿದಾರರ ಹಕ್ಕುಗಳು.–** (1) ದೌರ್ಜನ್ಯಕ್ಕೊಳಗಾದವರಿಗೆ, ಅವಲಂಬಿತರಿಗೆ ಮತ್ತು ಸಾಕ್ಷಿದಾರರಿಗೆ ಯಾವುದೇ ರೀತಿಯ ಭಯದ, ಬಲಾತ್ಕಾರದ ಅಥವಾ ಪ್ರಚೋದನೆಯ ಅಥವಾ ಹಿಂಸೆಯ ಅಥವಾ ಹಿಂಸೆಯ ಬೆದರಿಕೆಯ ವಿರುದ್ಧ ಅವರನ್ನು ಸಂರಕ್ಷಿಸುವುದಕ್ಕಾಗಿ ಏರ್ಪಾಡುಗಳನ್ನು ಮಾಡುವುದು ರಾಜ್ಯದ ಕರ್ತವ್ಯವಾಗಿರತಕ್ಕದ್ದು ಮತ್ತು ಅದರ ಜವಾಬ್ದಾರಿಯಾಗಿರತಕ್ಕದ್ದು.

(2) ದೌರ್ಜನ್ಯಕ್ಕೊಳಗಾದ ವ್ಯಕ್ತಿಯ ವಯಸ್ಸು ಅಥವಾ ಲಿಂಗ ಅಥವಾ ಶೈಕ್ಷಣಿಕ ಅನಾನುಕೂಲತೆ ಅಥವಾ ಬಡತನದ ಕಾರಣದಿಂದ ಉಂಟಾಗುವ ಯಾವುದೇ ವಿಶೇಷ ಅಗತ್ಯತೆಯನ್ನು ಪರಿಗಣಿಸಿ ದೌರ್ಜನ್ಯಕ್ಕೊಳಗಾದ ವ್ಯಕ್ತಿಯೊಂದಿಗೆ ನಿಷ್ಪಕ್ಷಪಾತವಾಗಿ, ಗೌರವಯುತವಾಗಿ ಮತ್ತು ಘನತೆಯಿಂದ ವ್ಯವಹರಿಸತಕ್ಕದ್ದು.

(3) ದೌರ್ಜನ್ಯಕ್ಕೊಳಗಾದ ವ್ಯಕ್ತಿಯು ಅಥವಾ ಆತನ ಅವಲಂಬಿತರು, ಯಾವುದೇ ಜಾಮೀನು ವ್ಯವಹರಣೆಯೂ ಒಳಗೊಂಡಂತೆ ಯಾವುದೇ ನ್ಯಾಯಾಲಯದ ವ್ಯವಹರಣೆಗಳ ಬಗ್ಗೆ ಸಮಂಜಸವಾಗಿ, ನಿಖರವಾಗಿ ಮತ್ತು ಸಕಾಲದಲ್ಲಿ ತಿಳಿದುಕೊಳ್ಳುವ ಹಕ್ಕನ್ನು ಹೊಂದಿರತಕ್ಕದ್ದು ಮತ್ತು ವಿಶೇಷ ಸರ್ಕಾರಿ ಪ್ರಾಸಿಕ್ಯೂಟರನು ಅಥವಾ ರಾಜ್ಯ ಸರ್ಕಾರವು ಈ ಅಧಿನಿಯಮದ ಮೇರೆಗೆ ಯಾವುದೇ ವ್ಯವಹರಣೆಗಳ ಬಗ್ಗೆ ದೌರ್ಜನ್ಯಕ್ಕೊಳಗಾದ ವ್ಯಕ್ತಿಗೆ ತಿಳಿಸತಕ್ಕದ್ದು.

(4) ಯಾವುದೇ ದಸ್ತಾವೇಜುಗಳನ್ನು ಅಥವಾ ವಿಷಯ ಸಾಮಗ್ರಿಯನ್ನು ಹಾಜರುಪಡಿಸುವುದಕ್ಕೆ, ಪಕ್ಷಕಾರರನ್ನು ಕರೆಸುವುದಕ್ಕೆ, ಸಾಕ್ಷಿದಾರರನ್ನು ಕರೆಸುವುದಕ್ಕೆ, ಹಾಜರಿದ್ದವರನ್ನು ವಿಚಾರಣೆ ಮಾಡುವುದಕ್ಕೆ ವಿಶೇಷ ನ್ಯಾಯಾಲಯಕ್ಕೆ ಅಥವಾ ಪ್ರತ್ಯೇಕ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲು ದೌರ್ಜನ್ಯಕ್ಕೊಳಗಾದ ವ್ಯಕ್ತಿಗೆ ಅಥವಾ ಆತನ ಅವಲಂಬಿತರಿಗೆ ಅಧಿಕಾರವಿರತಕ್ಕದ್ದು.

(5) ಆಪಾದಿತನಿಗೆ ಜಾಮೀನು ನೀಡುವುದಕ್ಕೆ, ಆಪಾದಿತನ ವಿಮೋಚನೆಗೆ, ಬಿಡುಗಡೆಗೆ, ಆಪಾದಿತನಿಗೆ ಪೆರೋಲ್ ನೀಡುವುದಕ್ಕೆ, ಆಪಾದಿತನ ಅಪರಾಧ ನಿರ್ಣಯಕ್ಕೆ ಅಥವಾ ಶಿಕ್ಷೆಗೆ ಅಥವಾ ಯಾವುದೇ ಸಂಬಂಧಿತ ವ್ಯವಹರಣೆಗಳಿಗೆ ಅಥವಾ ವಾದ ಮಂಡನೆಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ ತನ್ನ ಅಹವಾಲನ್ನು ಹೇಳಿಕೊಳ್ಳಲು ಮತ್ತು ಅಪರಾಧ ನಿರ್ಣೀತವಾದ ಬಗ್ಗೆ, ಖುಲಾಸೆ ಬಗ್ಗೆ ಅಥವಾ ಶಿಕ್ಷೆ ವಿಧಿಸುವ ಬಗ್ಗೆ ಲಿಖಿತದಲ್ಲಿ ಭಿನ್ನವಿಸಿಕೊಳ್ಳಲು ದೌರ್ಜನ್ಯಕ್ಕೊಳಗಾದ ವ್ಯಕ್ತಿ ಅಥವಾ ಆತನ ಅವಲಂಬಿತರು ಹಕ್ಕುಳ್ಳವರಾಗಿರತಕ್ಕದ್ದು.

(6) ದಂಡ ಪ್ರಕ್ರಿಯಾ ಸಂಹಿತೆ, 1973 (1974 ರ 2)ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, ವಿಶೇಷ ನ್ಯಾಯಾಲಯವು ಅಥವಾ ಪ್ರತ್ಯೇಕ ವಿಶೇಷ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ಮೊಕದ್ದಮೆಯ

ಅಧಿವಿಚಾರಣೆ ನಡೆಸುವಾಗ ದೌರ್ಜನ್ಯಕ್ಕೊಳಗಾದ ವ್ಯಕ್ತಿಗೆ ಮತ್ತು ಅವನ ಅವಲಂಬಿತರಿಗೆ, ಮಾಹಿತಿದಾರನಿಗೆ ಅಥವಾ ಸಾಕ್ಷಿದಾರರಿಗೆ,–

(ಎ) ನ್ಯಾಯವನ್ನು ದೊರಕಿಸಿ ಕೊಡುವುದಕ್ಕೆ ಸಂಪೂರ್ಣ ರಕ್ಷಣೆಯನ್ನು;

(ಬಿ) ತನಿಖೆ, ವಿಚಾರಣೆ ಮತ್ತು ಅಧಿವಿಚಾರಣೆಯ ಅವಧಿಯಲ್ಲಿನ ಪ್ರಯಾಣ ಮತ್ತು ನಿರ್ವಹಣೆಯ ವೆಚ್ಚಗಳನ್ನು;

(ಸಿ) ತನಿಖೆ, ವಿಚಾರಣೆ ಮತ್ತು ಅಧಿವಿಚಾರಣೆಯ ಅವಧಿಯಲ್ಲಿ ಸಾಮಾಜಿಕ–ಆರ್ಥಿಕ ಪುನರ್ ವಸತಿಯನ್ನು; ಮತ್ತು

(ಡಿ) ಪುನರ್ ನೆಲೆಯನ್ನು

– ಒದಗಿಸತಕ್ಕದ್ದು.

(7) ಯಾರೇ ದೌರ್ಜನ್ಯಕ್ಕೊಳಗಾದ ವ್ಯಕ್ತಿಗೆ ಅಥವಾ ಆತನ ಅವಲಂಬಿತರಿಗೆ, ಮಾಹಿತಿದಾರನಿಗೆ ಅಥವಾ ಸಾಕ್ಷಿದಾರರಿಗೆ ಒದಗಿಸಿರುವ ಸಂರಕ್ಷಣೆಯ ಕುರಿತು ರಾಜ್ಯವು ಸಂಬಂಧಪಟ್ಟ ವಿಶೇಷ ನ್ಯಾಯಾಲಯಕ್ಕೆ ಅಥವಾ ಪ್ರತ್ಯೇಕ ವಿಶೇಷ ನ್ಯಾಯಾಲಯಕ್ಕೆ ತಿಳಿಸತಕ್ಕದ್ದು ಮತ್ತು ಒದಗಿಸಿರುವ ಸಂರಕ್ಷಣೆಯನ್ನು ಅಂಥ ನ್ಯಾಯಾಲಯವು ನಿಯತಕಾಲಿಕವಾಗಿ ಪುನರ್ ಅವಲೋಕಿಸತಕ್ಕದ್ದು ಮತ್ತು ನ್ಯಾಯಾಲಯವು ಸೂಕ್ತ ಆದೇಶಗಳನ್ನು ಹೊರಡಿಸತಕ್ಕದ್ದು.

(8) ಉಪ ಪ್ರಕರಣ (6)ರ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಸಂಬಂಧಪಟ್ಟ ವಿಶೇಷ ನ್ಯಾಯಾಲಯವು ಅಥವಾ ಪ್ರತ್ಯೇಕ ವಿಶೇಷ ನ್ಯಾಯಾಲಯವು, ಅದರ ಮುಂದೆ ಇರುವ ಯಾವುದೇ ವ್ಯವಹರಣೆಗಳಲ್ಲಿ, ದೌರ್ಜನ್ಯಕ್ಕೊಳಗಾದ ವ್ಯಕ್ತಿಯು ಅಥವಾ ಆತನ ಅವಲಂಬಿತನು, ಮಾಹಿತಿದಾರನು ಅಥವಾ ಸಾಕ್ಷಿದಾರನು ಅರ್ಜಿ ಸಲ್ಲಿಸಿದಾಗ ಅಥವಾ ಅಂಥ ದೌರ್ಜನ್ಯಕ್ಕೊಳಗಾದ ವ್ಯಕ್ತಿಗೆ, ಮಾಹಿತಿದಾರನಿಗೆ ಅಥವಾ ಸಾಕ್ಷಿದಾರನಿಗೆ ಸಂಬಂಧಿಸಿದಂತೆ ವಿಶೇಷ ಸರ್ಕಾರಿ ಪ್ರಾಸಿಕ್ಯೂಟರ್ ಅರ್ಜಿ ಸಲ್ಲಿಸಿದಾಗ ಅಥವಾ ಸದರಿ ನ್ಯಾಯಾಲಯವು ತಾನಾಗಿಯೇ ಈ ಮುಂದಿನವೂ ಒಳಗೊಂಡಂತೆ ಕ್ರಮಗಳನ್ನು ತೆಗೆದುಕೊಳ್ಳಬಹುದು,–

(ಎ) ಸಾರ್ವಜನಿಕರಿಗೆ ಲಭ್ಯವಾಗಬಹುದಾದ ಮೊಕದ್ದಮೆಗೆ ಸಂಬಂಧಿಸಿದಂತೆ, ನ್ಯಾಯಾಲಯದ ಆದೇಶಗಳಲ್ಲಿ ಅಥವಾ ತೀರ್ಪುಗಳಲ್ಲಿ ಅಥವಾ ಯಾವುದೇ ದಾಖಲೆಗಳಲ್ಲಿ ಇರುವ ಸಾಕ್ಷಿದಾರರ ಹೆಸರುಗಳನ್ನು ಮತ್ತು ವಿಳಾಸಗಳನ್ನು ಗುಪ್ತವಾಗಿರಿಸುವುದು;

(ಬಿ) ಸಾಕ್ಷಿದಾರರ ಗುರುತನ್ನು ಮತ್ತು ವಿಳಾಸಗಳನ್ನು ಬಹಿರಂಗಪಡಿಸದಿರುವುದಕ್ಕಾಗಿ ನಿರ್ದೇಶನಗಳನ್ನು ಹೊರಡಿಸುವುದು;

(ಸಿ) ದೌರ್ಜನ್ಯಕ್ಕೊಳಗಾದ ವ್ಯಕ್ತಿಗೆ, ಮಾಹಿತಿದಾರನಿಗೆ ಅಥವಾ ಸಾಕ್ಷಿದಾರರಿಗೆ ಕಿರುಕುಳಕ್ಕೆ ಸಂಬಂಧಿಸಿದ ಯಾವುದೇ ದೂರಿನ ಸಂಬಂಧದಲ್ಲಿ ಮತ್ತು ಅವಶ್ಯವೆನಿಸಿದರೆ, ಅದೇ ದಿನದಂದು ಸಂರಕ್ಷಣೆಗಾಗಿ ಸೂಕ್ತ ಆದೇಶಗಳನ್ನು ಹೊರಡಿಸಲು ಆ ಕೂಡಲೇ ಕ್ರಮವನ್ನು ತೆಗೆದುಕೊಳ್ಳುವುದು:

ಪರಂತು, (ಸಿ) ಖಂಡದ ಮೇರೆಗೆ ಸ್ವೀಕರಿಸಿದ ದೂರಿನ ವಿಚಾರಣೆಯನ್ನು ಅಥವಾ ತನಿಖೆಯನ್ನು ಅಂಥ ನ್ಯಾಯಾಲಯವು ಮುಖ್ಯ ಮೊಕದ್ದಮೆಯಿಂದ ಪ್ರತ್ಯೇಕಿಸಿ, ಅಧಿವಿಚಾರಣೆ ಮಾಡತಕ್ಕದ್ದು ಮತ್ತು ದೂರನ್ನು ಸ್ವೀಕರಿಸಿದ ದಿನಾಂಕದಿಂದ ವಿಚಾರಣೆಯನ್ನು ಎರಡು ತಿಂಗಳ ಅವಧಿಯೊಳಗೆ ಮುಕ್ತಾಯಗೊಳಿಸತಕ್ಕದ್ದು:

ಮತ್ತು ಪರಂತು, (ಸಿ) ಖಂಡದ ಮೇರೆಗಿನ ದೂರು ಯಾರೇ ಲೋಕ ನೌಕರನ ವಿರುದ್ಧವಾಗಿದ್ದಲ್ಲಿ, ನ್ಯಾಯಾಲಯವು, ಸಂದರ್ಭಾನುಸಾರ ದೌರ್ಜನ್ಯಕ್ಕೊಳಗಾದ ವ್ಯಕ್ತಿಯ, ಮಾಹಿತಿದಾರನ ಅಥವಾ ಸಾಕ್ಷಿದಾರನ ಯಾವುದೇ ವಿಷಯದಲ್ಲಿ, ಅದು ಇತ್ಯರ್ಥದಲ್ಲಿರುವ ಮೊಕದ್ದಮೆಗೆ ಸಂಬಂಧಿಸಿರಲಿ ಅಥವಾ ಸಂಬಂಧಿಸಿರದೆ ಇರಲಿ, ಲೋಕ ನೌಕರನು ನ್ಯಾಯಾಲಯದ ಅನುಮತಿ ವಿನಃ ಹಸ್ತಕ್ಷೇಪ ಮಾಡದಂತೆ ನಿರ್ಬಂಧಿಸತಕ್ಕದ್ದು.

(9) ದೌರ್ಜನ್ಯಕ್ಕೊಳಗಾದ ವ್ಯಕ್ತಿಯು, ಮಾಹಿತಿದಾರನು ಅಥವಾ ಸಾಕ್ಷಿದಾರರು ತಮ್ಮ ವಿರುದ್ಧ ಯಾವುದೇ ರೀತಿಯ ಬೆದರಿಕೆಯ, ಬಲಾತ್ಕಾರದ ಅಥವಾ ಪ್ರಚೋದನೆಯ ಅಥವಾ ಹಿಂಸೆಯ ಅಥವಾ ಹಿಂಸೆಯ ಭಯದ ಬಗ್ಗೆ ಮೌಖಿಕವಾಗಿಯಾಗಲಿ ಅಥವಾ ಲಿಖಿತವಾಗಿಯಾಗಲಿ ನೀಡುವ ದೂರನ್ನು ತನಿಖಾಧಿಕಾರಿಯು ಮತ್ತು ಠಾಣಾಧಿಕಾರಿಯು ದಾಖಲಿಸಿಕೊಳ್ಳುವುದು ಅವರ ಕರ್ತವ್ಯವಾಗಿರತಕ್ಕದ್ದು ಮತ್ತು ಪ್ರಥಮ ಮಾಹಿತಿ ವರದಿಯ ಛಾಯಾ ಪ್ರತಿಯನ್ನು ಉಚಿತವಾಗಿ ಅವರಿಗೆ ಕೂಡಲೇ ನೀಡತಕ್ಕದ್ದು.

(10) ಈ ಅಧಿನಿಯಮದ ಮೇರೆಗಿನ ಅಪರಾಧಕ್ಕೆ ಸಂಬಂಧಪಟ್ಟ ಎಲ್ಲಾ ವ್ಯವಹರಣೆಗಳನ್ನು ವಿಡಿಯೋ ರೆಕಾರ್ಡಿಂಗ್ ಮಾಡಿಕೊಳ್ಳತಕ್ಕದ್ದು.

(11) ದೌರ್ಜನ್ಯಕ್ಕೊಳಗಾದವರು ಮತ್ತು ಸಾಕ್ಷಿದಾರರು ನ್ಯಾಯವನ್ನು ಪಡೆಯಲು ಅವರು ಹೊಂದಿರುವ, ಈ ಮುಂದೆ ಹೇಳಿರುವ, ಹಕ್ಕುಗಳ ಮತ್ತು ಅಧಿಕಾರಗಳ ಅನುಷ್ಠಾನವನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ ಸಮುಚಿತ ಯೋಜನೆಯನ್ನು ನಿರ್ದಿಷ್ಟಪಡಿಸುವುದು ಆಯಾ ರಾಜ್ಯದ ಕರ್ತವ್ಯವಾಗಿರತಕ್ಕದ್ದು,–

(ಎ) ದಾಖಲಿಸಿಕೊಂಡಿದ್ದ ಪ್ರಥಮ ಮಾಹಿತಿ ವರದಿಯ ಒಂದು ಪ್ರತಿಯನ್ನು ಉಚಿತವಾಗಿ ಒದಗಿಸುವುದು;

(ಬಿ) ದೌರ್ಜನ್ಯಕ್ಕೊಳಗಾದವರಿಗೆ ಅಥವಾ ಅವರ ಅವಲಂಬಿತರಿಗೆ ನಗದು ರೂಪದಲ್ಲಿ ಅಥವಾ ವಸ್ತು ರೂಪದಲ್ಲಿ ಆ ಕೂಡಲೇ ಪರಿಹಾರವನ್ನು ಒದಗಿಸುವುದು;

(ಸಿ) ದೌರ್ಜನ್ಯಕ್ಕೊಳಗಾದವರಿಗೆ ಅಥವಾ ಅವರ ಅವಲಂಬಿತರಿಗೆ ಮತ್ತು ಸಾಕ್ಷಿದಾರರಿಗೆ ಅವಶ್ಯ ರಕ್ಷಣೆಯನ್ನು ಒದಗಿಸುವುದು;

(ಡಿ) ಮರಣದ ಅಥವಾ ಗಾಯ ಆಗಿರುವ ಅಥವಾ ಸ್ವತ್ತಿಗೆ ಹಾನಿಯಾದ ಸಂದರ್ಭದಲ್ಲಿ ಪರಿಹಾರವನ್ನು ಒದಗಿಸುವುದು;

(ಇ) ದೌರ್ಜನ್ಯಕ್ಕೊಳಗಾದವರಿಗೆ ಆಹಾರವನ್ನು ಅಥವಾ ಬಳಕೆಗೆ ನೀರನ್ನು ಅಥವಾ ಧರಿಸಲು ಬಟ್ಟೆಯನ್ನು ಅಥವಾ ಆಶ್ರಯಕ್ಕೆ ಮನೆಯನ್ನು ಅಥವಾ ವೈದ್ಯಕೀಯ ನೆರವನ್ನು ಅಥವಾ ಸಾರಿಗೆ ಸೌಲಭ್ಯಗಳನ್ನು ಅಥವಾ ದಿನಭತ್ಯೆಯನ್ನು ಏರ್ಪಾಡು ಮಾಡುವುದು;

(ಎಫ್) ದೌರ್ಜನ್ಯಕ್ಕೊಳಗಾದವರಿಗೆ ಮತ್ತು ಅವರ ಅವಲಂಬಿತರಿಗೆ ಜೀವನ ನಿರ್ವಹಣಾ ವೆಚ್ಚಗಳನ್ನು ಒದಗಿಸುವುದು;

(ಜಿ) ದೌರ್ಜನ್ಯಕ್ಕೊಳಗಾದವರು ದೂರನ್ನು ನೀಡುವ ಕಾಲದಲ್ಲಿ ಮತ್ತು ಪ್ರಥಮ ಮಾಹಿತಿ ವರದಿಯನ್ನು ನೋಂದಾಯಿಸುವ ಸಮಯದಲ್ಲಿ ಅವರಿಗಿರುವ ಹಕ್ಕುಗಳ ಕುರಿತು ಮಾಹಿತಿಯನ್ನು ಒದಗಿಸುವುದು;

(ಹೆಚ್) ದೌರ್ಜನ್ಯಕ್ಕೊಳಗಾದವರಿಗೆ ಅಥವಾ ಅವರ ಅವಲಂಬಿತರಿಗೆ ಮತ್ತು ಸಾಕ್ಷಿದಾರರಿಗೆ ಬೆದರಿಕೆ ಹಾಕದಂತೆ ಮತ್ತು ಕಿರುಕುಳ ಉಂಟಾಗದಂತೆ ರಕ್ಷಣೆಯನ್ನು ಒದಗಿಸುವುದು;

(ಐ) ದೌರ್ಜನ್ಯಕ್ಕೊಳಗಾದವರಿಗೆ ಅಥವಾ ಅವರ ಅವಲಂಬಿತರಿಗೆ ಅಥವಾ ಸಹವರ್ತಿ ಸಂಘಸಂಸ್ಥೆಗಳಿಗೆ ಅಥವಾ ವ್ಯಕ್ತಿಗಳಿಗೆ, ತನಿಖೆಯ ಮತ್ತು ಆರೋಪ ಪಟ್ಟಿಯ ಸ್ಥಿತಿಗತಿಯ ಬಗ್ಗೆ ಮಾಹಿತಿಯನ್ನು ಒದಗಿಸುವುದು ಮತ್ತು ಉಚಿತವಾಗಿ ಆರೋಪ ಪಟ್ಟಿಯ ಒಂದು ಪ್ರತಿಯನ್ನು ಒದಗಿಸುವುದು;

(ಜೆ) ವೈದ್ಯಕೀಯ ಪರೀಕ್ಷೆಯ ಕಾಲದಲ್ಲಿ ಅವಶ್ಯ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳುವುದು;

(ಕೆ) ದೌರ್ಜನ್ಯಕ್ಕೊಳಗಾದವರಿಗೆ ಅಥವಾ ಅವರ ಅವಲಂಬಿತರಿಗೆ ಅಥವಾ ಸಹವರ್ತಿ ಸಂಘಸಂಸ್ಥೆಗಳಿಗೆ ಅಥವಾ ವ್ಯಕ್ತಿಗಳಿಗೆ ಪರಿಹಾರಕ್ಕೆ ಸಂಬಂಧಿಸಿದ ಮೊತ್ತದ ಬಗ್ಗೆ ಮಾಹಿತಿಯನ್ನು ಒದಗಿಸುವುದು;

(ಎಲ್) ದೌರ್ಜನ್ಯಕ್ಕೊಳಗಾದವರಿಗೆ ಅಥವಾ ಅವರ ಅವಲಂಬಿತರಿಗೆ ಅಥವಾ ಸಹವರ್ತಿ ಸಂಘಸಂಸ್ಥೆಗಳಿಗೆ ಅಥವಾ ವ್ಯಕ್ತಿಗಳಿಗೆ ತನಿಖೆಯ ಮತ್ತು ಅಧಿವಿಚಾರಣೆಯ ದಿನಾಂಕದ ಮತ್ತು ಸ್ಥಳದ ಬಗ್ಗೆ ಮುಂಚಿತವಾಗಿಯೇ ಮಾಹಿತಿಯನ್ನು ಒದಗಿಸುವುದು;

(ಎಂ) ದೌರ್ಜನ್ಯಕ್ಕೊಳಗಾದವರಿಗೆ ಅಥವಾ ಅವರ ಅವಲಂಬಿತರಿಗೆ ಅಥವಾ ಸಹವರ್ತಿ ಸಂಘಸಂಸ್ಥೆಗಳಿಗೆ ಅಥವಾ ವ್ಯಕ್ತಿಗಳಿಗೆ ಮೊಕದ್ದಮೆಯ ಬಗ್ಗೆ ಮತ್ತು ಅಧಿವಿಚಾರಣೆಯ ಸಿದ್ಧತೆಯ ಬಗ್ಗೆ ಯಥೋಚಿತವಾದ ಸಾಕಷ್ಟು ತಿಳಿವಳಿಕೆಯನ್ನು ಕೊಡುವುದು ಮತ್ತು ಸದರಿ ಉದ್ದೇಶಕ್ಕಾಗಿ ಕಾನೂನು ನೆರವನ್ನು ಒದಗಿಸುವುದು;

(ಎನ್) ಈ ಅಧಿನಿಯಮದ ಮೇರೆಗಿನ ವ್ಯವಹರಣೆಗಳ ಪ್ರತಿಯೊಂದು ಹಂತದಲ್ಲಿ, ದೌರ್ಜನ್ಯಕ್ಕೊಳಗಾದವರ ಅಥವಾ ಅವರ ಅವಲಂಬಿತರ ಅಥವಾ ಸಹವರ್ತಿ ಸಂಘಸಂಸ್ಥೆಗಳ ಅಥವಾ ವ್ಯಕ್ತಿಗಳ ಹಕ್ಕುಗಳನ್ನು ಕಾರ್ಯಗತಗೊಳಿಸುವುದು ಮತ್ತು ಅಂಥ ಹಕ್ಕುಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅವಶ್ಯ ನೆರವನ್ನು ಒದಗಿಸುವುದು.

(12) ಸರ್ಕಾರೇತರ ಸಂಸ್ಥೆಗಳ, ಸಾಮಾಜಿಕ ಕಾರ್ಯಕರ್ತರ ಅಥವಾ ನ್ಯಾಯವಾದಿಗಳ ನೆರವನ್ನು ಪಡೆದುಕೊಳ್ಳುವುದಕ್ಕೆ ದೌರ್ಜನ್ಯಕ್ಕೊಳಗಾದವರು ಅಥವಾ ಅವರ ಅವಲಂಬಿತರು, ಹಕ್ಕನ್ನು ಹೊಂದಿರತಕ್ಕದ್ದು.

## ಅಧ್ಯಾಯ V

### ಸಂಕೀರ್ಣ

**16. ಸಾಮೂಹಿಕ ಜುಲ್ಮಾನೆಯನ್ನು ವಿಧಿಸಲು ರಾಜ್ಯ ಸರ್ಕಾರದ ಅಧಿಕಾರ.–** ನಾಗರಿಕ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1955 (1955ರ 22) ರ ಪ್ರಕರಣ 10ಎ ನ ಉಪಬಂಧಗಳು, ಸಾಧ್ಯವಾಗಬಹುದಾದಷ್ಟು ಮಟ್ಟಿಗೆ, ಅದಕ್ಕೆ ಸಂಬಂಧಿಸಿದ ಇತರೆ ಎಲ್ಲಾ ವಿಷಯಗಳಿಗೆ ಅನ್ವಯವಾಗತಕ್ಕದ್ದು.

**17. ಕಾನೂನು ಮತ್ತು ಸುವ್ಯವಸ್ಥೆಯ ಆಡಳಿತ ಯಂತ್ರವು ಕೈಗೊಳ್ಳಬೇಕಾದ ಪ್ರತಿಬಂಧಕ ಕ್ರಮ.–** (1) ಒಬ್ಬ ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ಉಪವಿಭಾಗೀಯ ಮ್ಯಾಜಿಸ್ಟ್ರೇಟ್ ಅಥವಾ ಇತರ ಯಾರೇ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಅಥವಾ ಪೊಲೀಸ್ ಡೆಪ್ಯುಟಿ ಸೂಪರಿಂಟೆಂಡೆಂಟ್‌ನ ದರ್ಜೆಗೆ ಕಡಿಮೆ ಇಲ್ಲದ ಯಾರೇ ಪೊಲೀಸ್ ಅಧಿಕಾರಿಯು ಮಾಹಿತಿಯನ್ನು ಸ್ವೀಕರಿಸಿದ ಮೇಲೆ ಮತ್ತು ತಾನು ಅವಶ್ಯವೆಂದು ಯೋಚಿಸಬಹುದಾದಂಥ ವಿಚಾರಣೆಯನ್ನು ಮಾಡಿದ ತರುವಾಯ, ತನ್ನ ಅಧಿಕಾರವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಯಾವುದೇ ಸ್ಥಳದಲ್ಲಿ ವಾಸಿಸುವ ಅಥವಾ ಅಲ್ಲಿಗೆ ಮೇಲಿಂದ ಮೇಲೆ ಬರುವ, ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಸೇರಿಲ್ಲದ ಒಬ್ಬ ವ್ಯಕ್ತಿಯು ಅಥವಾ ವ್ಯಕ್ತಿಗಳ ಗುಂಪು ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಮಾಡುವ ಸಂಭವವಿದೆಯೆಂದು ಅಥವಾ ಯಾವುದೇ ಅಪರಾಧವನ್ನು ಮಾಡಲು ಬೆದರಿಕೆ ಹಾಕಿರುವನೆಂದು/ ಹಾಕಿರುವುದೆಂದು ನಂಬಲು ಕಾರಣವಿದ್ದರೆ ಮತ್ತು ಅವನು ಕ್ರಮ ಜರುಗಿಸುವುದಕ್ಕಾಗಿ ಸಾಕಷ್ಟು ಕಾರಣವಿದೆ ಎಂದು ಅಭಿಪ್ರಾಯಪಟ್ಟರೆ, ಅಂಥ ಪ್ರದೇಶವನ್ನು ದೌರ್ಜನ್ಯಗಳ ಪ್ರವೃತ್ತಿಯನ್ನು ಹೊಂದಿರುವ ಪ್ರದೇಶವೆಂದು ಘೋಷಿಸಬಹುದು ಮತ್ತು ಶಾಂತಿ ಮತ್ತು ಸದ್ವರ್ತನೆಯನ್ನು ಕಾಪಾಡುವುದಕ್ಕಾಗಿ ಮತ್ತು ಸಾರ್ವಜನಿಕ ಸುವ್ಯವಸ್ಥೆ ಮತ್ತು ನೆಮ್ಮದಿಯ ಪಾಲನೆಗಾಗಿ ಅವಶ್ಯಕ ಕ್ರಮವನ್ನು ಕೈಗೊಳ್ಳಬಹುದು ಮತ್ತು ಪ್ರತಿಬಂಧಕ ಕ್ರಮವನ್ನು ಕೈಗೊಳ್ಳಬಹುದು.

(2) ಸಂಹಿತೆಯ VIII, X ಮತ್ತು XI ನೇ ಅಧ್ಯಾಯಗಳ ಉಪಬಂಧಗಳು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಉಪ ಪ್ರಕರಣ (1)ರ ಉದ್ದೇಶಗಳಿಗೆ ಅನ್ವಯವಾಗತಕ್ಕದ್ದು.

(3) ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ದೌರ್ಜನ್ಯಗಳನ್ನು ತಡೆಗಟ್ಟಲು ಮತ್ತು ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಸದಸ್ಯರಲ್ಲಿ ಭದ್ರತೆಯ ಭಾವನೆಯನ್ನು ಮೂಡಿಸುವಂಥ ಯೋಜನೆ ಅಥವಾ ಯೋಜನೆಗಳನ್ನು ರೂಪಿಸತಕ್ಕದ್ದು ಮತ್ತು ಅಂಥ ಯೋಜನೆ ಅಥವಾ ಯೋಜನೆಗಳಲ್ಲಿ ನಿರ್ದಿಷ್ಟಪಡಿಸಿದ ಸೂಕ್ತ ಕ್ರಮವನ್ನು ಉಪ ಪ್ರಕರಣ (1)ರಲ್ಲಿ ಉಲ್ಲೇಖಿಸಿದ ಅಧಿಕಾರಿಗಳು ಯಾವ ರೀತಿಯಲ್ಲಿ ಕೈಗೊಳ್ಳತಕ್ಕದ್ದೆಂಬುದನ್ನು ನಿರ್ದಿಷ್ಟಪಡಿಸತಕ್ಕದ್ದು.

**18. ಸಂಹಿತೆಯ ಪ್ರಕರಣ 438, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಮಾಡುವ ವ್ಯಕ್ತಿಗಳಿಗೆ ಅನ್ವಯವಾಗತಕ್ಕದ್ದಲ್ಲ.–** ಸಂಹಿತೆಯ ಪ್ರಕರಣ 438ರಲ್ಲಿ ಇರುವುದು ಯಾವುದೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಮಾಡಿರುವನೆಂಬ ಆಪಾದನೆಯ ಮೇಲೆ ಯಾರೇ ವ್ಯಕ್ತಿಯ ದಸ್ತಗಿರಿಯನ್ನೊಳಗೊಳ್ಳುವ ಯಾವುದೇ ಪ್ರಕರಣಕ್ಕೆ ಸಂಬಂಧಪಟ್ಟಂತೆ ಅನ್ವಯವಾಗತಕ್ಕದ್ದಲ್ಲ.

**18ಎ. ವಿಚಾರಣೆಯನ್ನು ಅಥವಾ ಅನುಮೋದನೆಯನ್ನು ಅಗತ್ಯಪಡಿಸತಕ್ಕದ್ದಲ್ಲ.–** (1) ಈ ಅಧಿನಿಯಮದ ಉದ್ದೇಶಕ್ಕಾಗಿ ಈ ಅಧಿನಿಯಮದ ಮೇರೆಗೆ ಅಪರಾಧವನ್ನು ಮಾಡಿರುವನೆಂದು ಯಾವ ವ್ಯಕ್ತಿಯ ಮೇಲೆ ಆಪಾದನೆ ಮಾಡಲಾಗಿದೆಯೋ,–

(ಎ) ಆ ಯಾರೇ ವ್ಯಕ್ತಿಯ ವಿರುದ್ಧ ಪ್ರಥಮ ಮಾಹಿತಿ ವರದಿಯ ನೋಂದಣಿಗಾಗಿ ಪ್ರಾರಂಭಿಕ ವಿಚಾರಣೆಯನ್ನು ಅಗತ್ಯಪಡಿಸತಕ್ಕದ್ದಲ್ಲ; ಅಥವಾ

(ಬಿ) ತನಿಖಾಧಿಕಾರಿಯು, ಅವಶ್ಯಕವೆನಿಸಿದರೆ, ಯಾರೇ ವ್ಯಕ್ತಿಯನ್ನು ದಸ್ತಗಿರಿ ಮಾಡುವುದಕ್ಕಾಗಿ ಅನುಮೋದನೆಗೆ ಅಗತ್ಯಪಡಿಸತಕ್ಕದ್ದಲ್ಲ ಮತ್ತು ಈ ಅಧಿನಿಯಮದ ಅಥವಾ ಸಂಹಿತೆಯ ಮೇರೆಗೆ ಉಪಬಂಧಿಸಿರುವುದರ ಹೊರತು ಇತರ ಪ್ರಕ್ರಿಯೆಯು ಅನ್ವಯವಾಗತಕ್ಕದ್ದಲ್ಲ.

(2) ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು ಅಥವಾ ಆದೇಶ ಅಥವಾ ನಿರ್ದೇಶನ ಏನೇ ಇದ್ದರೂ, ಈ ಅಧಿನಿಯಮದ ಮೇರೆಗಿನ ಮೊಕದ್ದಮೆಗೆ, ಸಂಹಿತೆಯ ಪ್ರಕರಣ 438ರ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ.

**19. ಸಂಹಿತೆಯ ಪ್ರಕರಣ 360 ಅಥವಾ ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮವು ಈ ಅಧಿನಿಯಮದ ಮೇರೆಗಿನ ಅಪರಾಧದ ಬಗ್ಗೆ ತಪ್ಪಿತಸ್ಥರಾಗಿರುವ ವ್ಯಕ್ತಿಗಳಿಗೆ ಅನ್ವಯವಾಗತಕ್ಕದ್ದಲ್ಲ.–** ಸಂಹಿತೆಯ ಪ್ರಕರಣ 360ರ ಉಪಬಂಧಗಳು ಮತ್ತು ಅಪರಾಧಿಗಳ ಪರಿವೀಕ್ಷಣಾ ಅಧಿನಿಯಮ, 1958 (1958ರ 20)ರ ಉಪಬಂಧಗಳು ಈ

ಅಧಿನಿಯಮದ ಮೇರೆಗಿನ ಅಪರಾಧವನ್ನು ಮಾಡಿರುವ ಬಗ್ಗೆ ತಪ್ಪಿತಸ್ಥನೆಂದು ನಿರ್ಧರಿಸಲಾಗಿರುವ ಹದಿನೆಂಟು ವರ್ಷಕ್ಕಿಂತ ಹೆಚ್ಚು ವಯಸ್ಸಿನ ಯಾರೇ ವ್ಯಕ್ತಿಗೆ ಅನ್ವಯವಾಗತಕ್ಕದ್ದಲ್ಲ.

**20. ಈ ಅಧಿನಿಯಮವು ಇತರ ಕಾನೂನುಗಳನ್ನು ಅಧ್ಯಾರೋಹಿಸತಕ್ಕದ್ದು.–** ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವಂತೆ ಹೊರತು, ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನು ಅಥವಾ ಯಾವುದೇ ರೂಢಿ ಅಥವಾ ಆಚರಣೆ ಅಥವಾ ಯಾವುದೇ ಅಂಥ ಕಾನೂನಿನ ಕಾರಣದಿಂದಾಗಿ ಪರಿಣಾಮವನ್ನು ಹೊಂದಿರುವ ಯಾವುದೇ ಲಿಖಿತದಲ್ಲಿ ಅದಕ್ಕೆ ಅಸಂಗತವಾದುದು ಏನೇ ಇದ್ದರೂ, ಪರಿಣಾಮವನ್ನು ಹೊಂದಿರತಕ್ಕದ್ದು.

**21. ಅಧಿನಿಯಮವನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವುದನ್ನು ಸುನಿಶ್ಚಿತಗೊಳಿಸಿಕೊಳ್ಳುವ ಬಗ್ಗೆ ಸರ್ಕಾರದ ಕರ್ತವ್ಯ.–** (1) ಕೇಂದ್ರ ಸರ್ಕಾರವು ಈ ಬಗ್ಗೆ ರಚಿಸಬಹುದಾದಂಥ ನಿಯಮಗಳಿಗೊಳಪಟ್ಟು, ರಾಜ್ಯ ಸರ್ಕಾರವು, ಈ ಅಧಿನಿಯಮವನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ಅವಶ್ಯವಾಗಬಹುದಾದಂಥ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ಕ್ರಮಗಳು,–

(i) ದೌರ್ಜನ್ಯಗಳಿಗೆ ಒಳಪಟ್ಟು ವ್ಯಕ್ತಿಗಳಿಗೆ ಕಾನೂನು ನೆರವನ್ನು ಒಳಗೊಂಡು ಅವರು ನ್ಯಾಯವನ್ನು ಪಡೆದುಕೊಳ್ಳಲು ಸಾಧ್ಯವಾಗುವಂತೆ, ಸಾಕಷ್ಟು ಸೌಲಭ್ಯಗಳ ವ್ಯವಸ್ಥೆ;

(ii) ಈ ಅಧಿನಿಯಮದ ಮೇರೆಗಿನ ಅಪರಾಧಗಳ ತನಿಖೆ ಮತ್ತು ಅಧಿವಿಚಾರಣೆಯ ಕಾಲದಲ್ಲಿ ದೌರ್ಜನ್ಯಗಳಿಗೆ ಗುರಿಯಾದವರನ್ನೂ ಒಳಗೊಂಡು ಸಾಕ್ಷಿದಾರರಿಗೆ ಪ್ರಯಾಣ ಮತ್ತು ಪೋಷಣೆ ವೆಚ್ಚಗಳ ವ್ಯವಸ್ಥೆ;

(iii) ದೌರ್ಜನ್ಯಗಳಿಗೆ ಗುರಿಯಾದವರ ಆರ್ಥಿಕ ಮತ್ತು ಸಾಮಾಜಿಕ ಪುನರ್ ವಸತಿಯ ವ್ಯವಸ್ಥೆ;

(iv) ಈ ಅಧಿನಿಯಮದ ಉಪಬಂಧಗಳ ಉಲ್ಲಂಘನೆಗೆ ಪ್ರಾಸಿಕ್ಯೂಷನ್‌ಗಳನ್ನು ಪ್ರಾರಂಭಿಸಲು ಅಥವಾ ಅವುಗಳ ಮೇಲೆ ಮೇಲ್ವಿಚಾರಣೆ ಮಾಡಲು ಅಧಿಕಾರಿಗಳ ನೇಮಕಾತಿ;

(v) ಅಂಥ ಕ್ರಮಗಳನ್ನು ರೂಪಿಸುವಲ್ಲಿ ಅಥವಾ ಕಾರ್ಯಗತಗೊಳಿಸುವಲ್ಲಿ ರಾಜ್ಯ ಸರ್ಕಾರಕ್ಕೆ ಸಹಾಯ ಮಾಡಲು ಸೂಕ್ತವೆಂದು ಆ ಸರ್ಕಾರವು ಯೋಜಿಸಬಹುದಾದಂಥ ಮಟ್ಟಗಳಲ್ಲಿ ಸಮಿತಿಗಳ ಸ್ಥಾಪನೆ;

(vi) ಈ ಅಧಿನಿಯಮದ ಉಪಬಂಧಗಳನ್ನು ಇನ್ನಷ್ಟು ಉತ್ತಮವಾಗಿ ಕಾರ್ಯಗತಗೊಳಿಸಲು ಕ್ರಮಗಳನ್ನು ಸೂಚಿಸುವ ದೃಷ್ಟಿಯಿಂದ ಈ ಅಧಿನಿಯಮದ ಉಪಬಂಧಗಳ ಕಾರ್ಯಾಚರಣೆಯ ಬಗ್ಗೆ ನಿಯತಕಾಲಿಕ ಸಮೀಕ್ಷೆಯ ವ್ಯವಸ್ಥೆ;

(vii) ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಸದಸ್ಯರು ದೌರ್ಜನ್ಯಗಳಿಗೆ ಒಳಗಾಗುವ ಸಂಭವವಿರುವ ಪ್ರದೇಶಗಳನ್ನು ಗುರುತಿಸುವುದು ಮತ್ತು ಅಂಥ ಸದಸ್ಯರಿಗೆ ಸಂರಕ್ಷಣೆಯನ್ನು ಸುನಿಶ್ಚಿತಗೊಳಿಸುವಂಥ ಕ್ರಮಗಳನ್ನು ಅಂಗೀಕರಿಸುವುದು

– ಇವುಗಳನ್ನು ಒಳಗೊಳ್ಳಬಹುದು.

(3) ಕೇಂದ್ರ ಸರ್ಕಾರವು ಉಪ ಪ್ರಕರಣ (1)ರ ಮೇರೆಗೆ ರಾಜ್ಯ ಸರ್ಕಾರಗಳು ಕೈಗೊಂಡ ಕ್ರಮಗಳನ್ನು ಸಮನ್ವಯಗೊಳಿಸಲು ಅವಶ್ಯವಾಗಬಹುದಾದಂಥ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(4) ಕೇಂದ್ರ ಸರ್ಕಾರವು, ಪ್ರತಿ ವರ್ಷ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ತಾನು ಮತ್ತು ರಾಜ್ಯ ಸರ್ಕಾರಗಳು ಈ ಪ್ರಕರಣದ ಉಪಬಂಧಗಳ ಅನುಸರಣೆಯಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ವರದಿಯನ್ನು ನೀಡತಕ್ಕದ್ದು.

**22. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ.–** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಬೇಕೆಂದು ಉದ್ದೇಶಿಸಿದಂಥ ಯಾವುದೇ ಕಾರ್ಯಕ್ಕಾಗಿ, ಕೇಂದ್ರ ಸರ್ಕಾರದ ವಿರುದ್ಧ ಅಥವಾ ರಾಜ್ಯ ಸರ್ಕಾರ ಅಥವಾ ಸರ್ಕಾರದ ಯಾರೇ ಅಧಿಕಾರಿ ಅಥವಾ ಪ್ರಾಧಿಕಾರಕ್ಕೆ ಅಥವಾ ಇತರ ಯಾರೇ ವ್ಯಕ್ತಿಯ ವಿರುದ್ಧ ಯವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**23. ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದಂತೆ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಮೂವತ್ತು ದಿವಸಗಳ ಒಟ್ಟು ಅವಧಿಗಾಗಿ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಎರಡೂ ಸದನಗಳು ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಒಪ್ಪಿದರೆ ಅಥವಾ ಎರಡೂ ಸದನಗಳು ಆ ನಿಯಮವನ್ನು ರಚಿಸಕೂಡದೆಂದು ಒಪ್ಪಿದರೆ, ಆ ತರುವಾಯ ಆ ನಿಯಮವು, ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು

ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಈ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಕಾನೂನು ಮಾನ್ಯತೆಗೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**ಅನುಸೂಚಿ**

**[ಪ್ರಕರಣ 3(2)(vಎ)ನ್ನು ನೋಡಿ]**

| **ಭಾರತ ದಂಡ ಸಂಹಿತೆ ಮೇರೆಗಿನ ಪ್ರಕರಣ** | **ಅಪರಾಧ ಮತ್ತು ಶಿಕ್ಷೆಯ ಹೆಸರು** |
|---|---|
| 120ಎ | ಆಪರಾಧಿಕ ಒಳಸಂಚಿನ ಪರಿಭಾಷೆ. |
| 120ಬಿ | ಆಪರಾಧಿಕ ಒಳಸಂಚಿಗೆ ದಂಡನೆ. |
| 141 | ಕಾನೂನಿಗೆ ವಿರುದ್ಧವಾದ ಕೂಟ. |
| 142 | ಕಾನೂನು ವಿರುದ್ಧ ಕೂಟದ ಸದಸ್ಯನಾಗಿರುವುದು. |
| 143 | ಕಾನೂನು ವಿರುದ್ಧ ಕೂಟದಲ್ಲಿರುವುದಕ್ಕಾಗಿ ದಂಡನೆ. |
| 144 | ಮಾರಕ ಆಯುಧವನ್ನು ಹೊಂದಿದ್ದು, ಕಾನೂನು ವಿರುದ್ಧ ಕೂಟವನ್ನು ಸೇರುವುದು. |
| 145 | ಚೆದುರಿ ಹೋಗಲು ಸಮಾದೇಶ ಮಾಡಲಾಗಿದೆಯೆಂದು ಗೊತ್ತಿದ್ದೂ ಕಾನೂನು ವಿರುದ್ಧ ಕೂಟವನ್ನು ಸೇರುವುದು ಅಥವಾ ಅದರಲ್ಲಿ ಮುಂದುವರಿಯುವುದು. |
| 146 | ದೊಂಬಿ. |
| 147 | ದೊಂಬಿ ಮಾಡಿದ್ದಕ್ಕಾಗಿ ದಂಡನೆ. |
| 148 | ಮಾರಕ ಆಯುಧವನ್ನು ಹೊಂದಿದ್ದು ದೊಂಬಿ ಮಾಡುವುದು. |
| 217 | ವ್ಯಕ್ತಿಗೆ ದಂಡನೆಯಾಗದಂತೆ ಅಥವಾ ಅವನ ಸ್ವತ್ತು ಮುಟ್ಟುಗೋಲಾಗದಂತೆ ರಕ್ಷಿಸುವ ಉದ್ದೇಶದಿಂದ ಲೋಕ ನೌಕರನು ಕಾನೂನಿನ ನಿರ್ದೇಶನವನ್ನು ಉಲ್ಲಂಘಿಸುವುದು. |
| 319 | ಗಾಯ. |
| 320 | ತೀವ್ರ ಗಾಯ. |
| 323 | ಸ್ವಯಿಚ್ಛೆಯಿಂದ ಗಾಯವನ್ನುಂಟು ಮಾಡಿದ್ದಕ್ಕೆ ದಂಡನೆ. |
| 324 | ಅಪಾಯಕಾರಿ ಆಯುಧಗಳಿಂದ ಅಥವಾ ಸಾಧನಗಳಿಂದ ಸ್ವಯಿಚ್ಛೆಯಿಂದ ಗಾಯವನ್ನುಂಟು ಮಾಡುವುದು. |
| 325 | ಸ್ವಯಿಚ್ಛೆಯಿಂದ ತೀವ್ರ ಗಾಯವನ್ನುಂಟು ಮಾಡಿದ್ದಕ್ಕೆ ದಂಡನೆ. |
| 326ಬಿ | ಸ್ವಯಿಚ್ಛೆಯಿಂದ ಆ್ಯಸಿಡನ್ನು ಎರಚುವುದು ಅಥವಾ ಎರಚಲು ಪ್ರಯತ್ನಿಸುವುದು. |
| 332 | ಲೋಕ ನೌಕರನು ತನ್ನ ಕರ್ತವ್ಯಗಳನ್ನು ನಿರ್ವಹಿಸದಂತೆ ಬೆದರಿಸಲು ಅವನಿಗೆ ಸ್ವಯಿಚ್ಛೆಯಿಂದ ಗಾಯವನ್ನುಂಟು ಮಾಡುವುದು. |

| | |
|---|---|
| 341 | ಅಕ್ರಮ ಪ್ರತಿಬಂಧಕ್ಕಾಗಿ ದಂಡನೆ. |
| 354 | ಹೆಂಗಸಿನ ಮಾನಭಂಗ ಮಾಡುವ ಉದ್ದೇಶದಿಂದ ಆಕೆಯ ಮೇಲೆ ಹಲ್ಲೆ ಮಾಡುವುದು ಅಥವಾ ಆಪರಾಧಿಕ ಬಲಪ್ರಯೋಗ ಮಾಡುವುದು. |
| 354ಎ | ಲೈಂಗಿಕ ಕಿರುಕುಳ ಮತ್ತು ಲೈಂಗಿಕ ಕಿರುಕುಳಕ್ಕೆ ದಂಡನೆ. |
| 354ಬಿ | ಮಹಿಳೆಯ ಬಟ್ಟೆ ಬರೆಯನ್ನು ಬಿಚ್ಚುವ ಉದ್ದೇಶದಿಂದ ಆಕೆ ಮೇಲೆ ಹಲ್ಲೆ ಮಾಡುವುದು ಅಥವಾ ಆಪರಾಧಿಕ ಬಲಪ್ರಯೋಗಿಸುವುದು. |
| 354ಸಿ | ಅನ್ಯರ ಲೈಂಗಿಕ ಕ್ರಿಯೆಯನ್ನು ಕದ್ದು ನೋಡುವುದು. |
| 354ಡಿ | ಗೊತ್ತಾಗದಂತೆ ಹಿಂಬಾಲಿಸುವುದು. |
| 359 | ಅಪಹರಣ. |
| 363 | ಅಪಹರಣಕ್ಕೆ ದಂಡನೆ. |
| 365 | ವ್ಯಕ್ತಿಯನ್ನು ಗೋಪ್ಯವಾಗಿ ಮತ್ತು ಅಕ್ರಮವಾಗಿ ಬಂಧನದಲ್ಲಿಟ್ಟುಕೊಳ್ಳುವ ಉದ್ದೇಶದಿಂದ ಅಪಹರಣ ಮಾಡುವುದು ಅಥವಾ ಬಲಾತ್ ಅಪಹರಣ ಮಾಡುವುದು. |
| 376ಬಿ | ಪ್ರತ್ಯೇಕ ವಾಸದ ಅವಧಿಯಲ್ಲಿ ಪತಿಯು ತನ್ನ ಪತ್ನಿಯೊಡನೆ ಲೈಂಗಿಕ ಸಂಭೋಗ ಮಾಡುವುದು. |
| 376ಸಿ | ಅಧಿಕಾರದಲ್ಲಿರುವ ವ್ಯಕ್ತಿಯಿಂದ ಲೈಂಗಿಕ ಸಂಭೋಗ. |
| 447 | ಆಪರಾಧಿಕ–ಅತಿಕ್ರಮಣ ಪ್ರವೇಶಕ್ಕೆ ದಂಡನೆ. |
| 506 | ಆಪರಾಧಿಕ ಭಯೋತ್ಪಾದನೆಗೆ ದಂಡನೆ. |
| 509 | ಮಹಿಳೆಯ ಮಾನಕ್ಕೆ ಕುಂದುಂಟು ಮಾಡುವ ಉದ್ದೇಶವಿರುವ ಅಕ್ಷರ, ಸನ್ನೆ ಅಥವಾ ಕೃತ್ಯ. |

* * * * *